# ಮಾಧ್ಯಮ ಮಂಗಳ

ಸಂಪುಟ: 12 ಸಂಚಿಕೆ: 02 ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ದಿನಾಂಕ:13-02-2017


ದಕ್ಷಿಣ ಕನ್ನಡದ ಪ್ರಾಕೃತಿಕ ಸ್ಥಿತಿಗತಿಗಳ ಮೇಲೆ ಸರಕಾರದ ವರದಿಗಳು

ಪುಟ: 2




ಬಲು ರುಚಿಕರ ಕುಂಟಾಲ ಹಣ್ಣು

ಪುಟ: 3



ಚೆಲುವಾಂತ ನಾಟ್ಯ ಮಯೂರಿ

ಪುಟ: 4



## ದೇಶದ ಪ್ರಮುಖ ಸಂಪತ್ತು ಯುವಪೀಳಿಗೆ: ಪ್ರೊ. ಎಲ್. ಪ್ರೇಮಶೇಖರ್

**ಮಂಗಳಗಂಗೋತ್ರಿ:** ದೇಶದ ಅಭಿವೃದ್ಧಿಯಲ್ಲಿ ಯುವಜನರ ಪಾತ್ರ ಮಹತ್ತರವಾದುದು. ಭಾರತದ ಯುವಶಕ್ತಿ ಕಠಿಣ ಪರಿಶ್ರಮ ಹಾಗೂ ಅಭಿವೃದ್ಧಿ ಪರ ಯೋಚನೆ, ವಿವೇಚನೆಯಿಂದ ಮುನ್ನಡೆದರೆ ಇನ್ನು ಕೆಲವು ವರ್ಷಗಳಲ್ಲಿ ಭಾರತ ಸೂಪರ್ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದು ಪಾಂಡಿಚೆರಿ ವಿಶ್ವವಿದ್ಯಾನಿಲಯದ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಪ್ರೊ. ಎಲ್ ಪ್ರೇಮಶೇಖರ್ ಅಭಿಪ್ರಾಯಪಟ್ಟರು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ 2016-17 ನೇ ಸಾಲಿನ ಸ್ನಾತ್ತಕೋತ್ತರ ವಿದ್ಯಾರ್ಥಿ ಪರಿಷತ್ ನ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡಿದರು.

ಚೀನಾ ದೇಶಕ್ಕೆ ಹೋಲಿಸಿದರೆ ಭಾರತ ಹೆಚ್ಚು ಯುವಜನತೆಯನ್ನು ಹೊಂದಿರುವ ರಾಷ್ಟ್ರ. ಚೀನಾದಲ್ಲಿ ಮಧ್ಯವಯಸ್ಸಿನವರೇ ಅತ್ಯಧಿಕ ಸಂಖ್ಯೆಯಲ್ಲಿದ್ದು ಇನ್ನು ನಿಧಾನವಾಗಿ



*ಪ್ರೊ. ಎಲ್ ಪ್ರೇಮಶೇಖರ್ 2016-17 ನೇ ಸಾಲಿನ ಸ್ನಾತ್ತಕೋತ್ತರ ವಿದ್ಯಾರ್ಥಿ ಪರಿಷತ್‌ನ ಉದ್ಘಾಟನೆಯನ್ನು ನೆರವೇರಿಸುತ್ತಿರುವುದು.*

ಚೀನಾ ದುರ್ಬಲವಾಗುತ್ತಾ ಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಅವರು ಹೇಳಿದರು.

ಕ್ರಾಂತಿಯಿಂದ ಆದ ಯಾವುದೇ ಬದಲಾವಣೆ ದೀರ್ಘ ಕಾಲ ಉಳಿಯುವಂತದ್ದಲ್ಲ. ಆದರೆ ವಿಕಾಸದಿಂದ ಹಂತ ಹಂತವಾಗಿ ಆಗುವ ಬದಲಾವಣೆ ದೀರ್ಘಕಾಲ ಶಾಶ್ವತವಾಗಿ ಉಳಿಯುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಹಾಗೂ ಯುವಕರು ಜೀವನದಲ್ಲಿ ಪರಿಶ್ರಮ, ಪ್ರಯತ್ನ ಹಾಗೂ ಸಂಯಮದೊಂದಿಗೆ ಉದ್ದೇಶಿತ ಗುರಿಯನ್ನು ತಲುಪುವಂತೆ ಕರೆ ನೀಡಿದರು

ಇಂದು ಮಾಧ್ಯಮಗಳು ಸುದ್ದಿಗಳಿಗಿಂತ ಹೆಚ್ಚು ವಿಷಯಗಳ ವಿಮರ್ಶೆಗಳನ್ನು ಮಾತ್ರ ಮಾಡುತ್ತಿವೆ. ಆದ್ದ-ರಿಂದ ನಾವು ಯಾವುದೇ ಘಟನೆ ಅಥವಾ ವಿಷಯವನ್ನು ನೇರವಾಗಿ ನೋಡುವುದರ ಬದಲು ಅದರ ನೈಜತೆಯನ್ನು ಅರಿತುಕೊಳ್ಳುವ ಪ್ರಯತ್ನ ಮಾಡಬೇಕು ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿವಿ ಕುಲಪತಿ ಪ್ರೊ. ಕೆ. ಭೈರಪ್ಪ, ದೇಶದ 740 ವಿಶ್ವವಿದ್ಯಾನಿಲಯದ ಪೈಕಿ ಮಂಗಳೂರು ವಿವಿಯು 24ನೇ ಸ್ಥಾನದಲ್ಲಿರುವುದು ಹೆಮ್ಮೆಯ ವಿಚಾರವಾಗಿದೆ. ವಿದ್ಯಾರ್ಥಿಗಳ ವಿದ್ಯಾರ್ಜನೆ ಹಾಗೂ ಸಂಶೋಧನೆ ಸೇರಿದಂತೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿವಿ ಉತ್ತಮ ಪ್ರೋತ್ಸಾಹ ನೀಡಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ದಿವಾಕರ ಶೆಟ್ಟಿ, ಉಪಾಧ್ಯಕ್ಷ ಶ್ಯಾಂ ಪ್ರಸಾದ್, ಕಾರ್ಯದರ್ಶಿ ಸುನೀಲ್ ವೀರೇಂದ್ರ ಮೊಗವೀರ, ಸಾಂಸ್ಕೃತಿಕ ಕಾರ್ಯದರ್ಶಿ ಸುಕ್ಷಿತಾ ರಾವ್ ಬಿ. ಮತ್ತು ಸಹ ಸಾಂಸ್ಕೃತಿಕ ಕಾರ್ಯದರ್ಶಿ ಅಶೋಕ್ ಆರ್. ಉಪಸ್ಥಿತರಿದ್ದರು.

ಮಂಗಳೂರು ವಿವಿಯ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದ ನಿರ್ದೇಶಕ ಪ್ರೊ. ಉದಯ ಬಾರ್ಕೂರು ವಿದ್ಯಾರ್ಥಿ ಪರಿಷತ್‌ನ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

## ಚಿನ್ನಕ್ಕಿಂತ ಅನ್ನ ಶ್ರೇಷ್ಠ, ಅನ್ನಕ್ಕಿಂತ ಮಣ್ಣು ಶ್ರೇಷ್ಠ




**ಮಂಗಳಗಂಗೋತ್ರಿ:** ಪ್ರತಿಯೊಬ್ಬರಿಗೂ ಚೆನ್ನಾಗಿ ಓದಿ ಉದ್ಯೋಗ ಪಡೆದು ಹಣ ಸಂಪಾದನೆ ಮಾಡಬೇಕು ಎನ್ನುವುದು ಜೀವನದ ಧ್ಯೇಯ ಆಗಿದೆ. ಇದರ ಹೊರತಾಗಿ ನಿಜವಾದ ಸಂಪಾದನೆ ದೇಶದ ಉತ್ಪಾದನೆ ಎಂದು ದಕ್ಷಿಣ ಕನ್ನಡ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ರವಿರಾಜ್ ಹೆಗ್ಡೆ ಹೇಳಿದರು.

ಇವರು ಇತ್ತೀಚೆಗೆ ಮಂಗಳೂರು ವಿವಿಯಲ್ಲಿ ನಡೆದ ವಾಣಿಜ್ಯ ವಿಭಾಗದಿಂದ ಆಯೋಜಿಸಲ್ಪಟ್ಟ ವಾಣಿಜ್ಯ ಸಂಘಟನೆ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಶಾಲಾ ಕಾಲೇಜಿನ ಕಲಿಕೆಯಿಂದ ಕಾಲುಭಾಗ ದೊರೆಯುತದೆ. ಕಲಿಕೆಯನ್ನು ಅರ್ಥ ಮಾಡಿಕೊಂಡಾಗ ಅರ್ಧದಷ್ಟು ದೊರೆಯುವುದು. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಮುಕ್ಕಾಲು ಭಾಗ ದೊರೆತರೆ, ಅನುಭವಗಳಿಂದ ಜೀವನಕ್ಕೆ ಪರಿಪೂರ್ಣತೆ ಬರುತ್ತದೆ. ಆ ಪರಿಪೂರ್ಣತೆಯನ್ನು ಹೊಂದಲು ನಾವು, ನಮ್ಮನ್ನು ಹೊರಜಗತ್ತಿಗೆ ತೆರೆದುಕೊಳ್ಳಬೇಕು. ವಿದ್ಯಾರ್ಥಿಗಳು ಹೊರಜಗತ್ತಿಗೆ ತೆರೆದುಕೊಂಡು ವ್ಯಕ್ತಿತ್ವ ವಿಕಸನ ಹೊಂದುವಲ್ಲಿ ಇಂತಹ ವಾಣಿಜ್ಯ ಸಂಘಟನೆಗಳು ಕಾರ್ಯ ನಿರ್ವಹಿಸುತ್ತವೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಾಣಿಜ್ಯ ವಿಭಾಗದ ಅಧ್ಯಕ್ಷರು ಪ್ರೊ. ವೈ.ಮುನಿರಾಜು ಮಾತನಾಡಿ ನಾವು ತರಗತಿಯಿಂದ ಹೊರಗಡೆ ಕಲಿಯುವುದು ಬಹಳಷ್ಟು ಇದೆ. ತರಗತಿಯಲ್ಲಿ ಕಲಿತ ಪಾಠ ಅಂಕಗಳನ್ನು ಕೊಟ್ಟರೆ, ಹೊರಗಡೆ ಕಲಿತ ಪಾಠ ಉತ್ತಮ ಜೀವನವನ್ನು ನೀಡುತ್ತದೆ. ನಮ್ಮ ಆಲೋಚನೆ ಮತ್ತು ಕಲ್ಪನೆಗಳನ್ನು ಹೊರ ಪ್ರಪಂಚಕ್ಕೆ ತೆರೆದುಕೊಂಡು ಜ್ಞಾನಗುಚ್ಛವನ್ನು ಸಂಪಾದಿಸಿ ಕೊಳ್ಳಬಹುದು. ಇದ-ರಿಂದ ವ್ಯಕ್ತಿಯು ಎಲ್ಲರಿಂದಲೂ ಗುರುತಿಸಿಕೊ ಳ್ಳುತ್ತಾನೆ ಎಂದು ಅವರು ಹೇಳಿದರು.

ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಪ್ರೊ. ರಘುರಾಮ್ ಮಾತನಾಡಿ ಯಾವಾಗ ಅವಕಾಶಗಳು ಬರುತ್ತವೆಯೋ ಆಗ ಅವುಗಳನ್ನು ಸ್ವೀಕರಿಸಲು ನಾವು ಸಮರ್ಥರಾಗಿರಬೇಕು ಮತ್ತು ಮತ್ತು ಅವುಗಳು ನಿಜವಾಗಿಯೂ ಒಳ್ಳೆಯ ಅವಕಾಶವೇ ಅಥವಾ ಅದೊಂದು ಸಮಸ್ಯೆಯೇ ಎಂಬುದನ್ನು ಗುರುತಿಸುವವರಾಗಿರಬೇಕು. ನಮ್ಮಲ್ಲಿನ ಸಬಲತೆ ಮತ್ತು ದುರ್ಬಲತೆಗಳನ್ನು ನಾವು ಕಂಡುಕೊಳ್ಳಲಾಗಲಿಲ್ಲವೆಂದಾದರೆ ಅವಕಾಶಗಳನ್ನು ಉಪಯೋಗಿಸಿ ಕೊಳ್ಳಲು ನಾವು ಸಮರ್ಥರಾಗಿರುವುದಿಲ್ಲ.

ತಪ್ಪುಗಳನ್ನು ಮಾಡಬೇಕು ಆ ತಪ್ಪುಗಳಿಂದಲೇ ಸರಿಯಾದುದನ್ನು ಕಲಿಯಬೇಕು. ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಂಘಟನೆಗಳ ಅಗತ್ಯವಿದೆ. ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸುವಲ್ಲಿ ಇಂತಹ ಸಂಘಟನೆಗಳು ಕೆಲಸ ಮಾಡುತ್ತವೆ ಎಂದು ಹೇಳಿದರು.

ವಾಣಿಜ್ಯ ಸಂಘಟನೆಯ ಅಧ್ಯಕ್ಷ ಅನುಪ್ ಕೆ. ಸ್ವಾಗತಿಸಿದರು. ವಿಭಾಗದ ಸಹನಿರ್ವಾಹಕ ಕಿರಣ್ ಕುಮಾರ್ ಕೆ. ವಂದಿಸಿದರು. ವಿದ್ಯಾರ್ಥಿನಿ ಆ್ಯಗ್ನೆಟ್ ಕಾರ್ಯಕ್ರಮ ನಿರೂಪಿಸಿದರು.

## ಸಂಶೋಧನಾ ಕಾರ್ಯದಲ್ಲಿ ಒಗ್ಗಟ್ಟು ಅಗತ್ಯ : ಡಾ. ಶಾಂತರಾಮ್ ಶೆಟ್ಟಿ

**ಮಂಗಳಗಂಗೋತ್ರಿ:** ಸಂಶೋಧನಾ ಕಾರ್ಯದಲ್ಲಿ ತಂಡದ ಪ್ರತಿಯೊಬ್ಬರ ಪ್ರಯತ್ನವೂ ಮುಖ್ಯವಾಗುತ್ತದೆ. ಮತ್ತು ಇಡೀ ತಂಡವು ಒಂದಾಗಿ, ಪ್ರತಿಯೊಬ್ಬರೂ ಸಂಶೋಧನೆಯಲ್ಲಿ ಭಾಗವಹಿಸಿದಾಗ ಉತ್ತಮ ಸಂಶೋಧನೆ ಹೊರಬರಲು ಸಾಧ್ಯ ಎಂದು ನಿಟ್ಟೆ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಶಾಂತರಾಮ್ ಶೆಟ್ಟಿ ಹೇಳಿದರು.

ಮಂಗಳೂರು ವಿಶ್ವವಿದಯಾನಿಲಯದಲ್ಲಿ ನಡೆದ, ಅಸೋಸಿಯೇಷನ್ ಆಫ್ ಬ್ರಿಟಿಷ್ ಸ್ಕಾಲರ್ ಆಯೋಜಿಸಿದ 'ಇಂಟರ್‌ಡಿಸ್ಸಿಪ್ಲಿನರಿ ರಿಸರ್ಚ್; ಚಾಲೆಂಜಸ್ ಆ್ಯಂಡ್ ಆಪರ್ಚುನಿಟಿಸ್' ವಿಚಾರಸಂಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರೋತ್ಸಾಹ ಮೂರು ವಿಧಗಳಿವೆ, ಮೊದಲನೆಯದು ಕೆಲಸದಿಂದ ಲಭಿಸುವ ಪ್ರೋತ್ಸಾಹನೆ, ಎರಡನೆಯದು ಪ್ರಶಸ್ತಿಯಿಂದ ಲಭಿಸುವ ಪ್ರೋತ್ಸಾಹ, ಹಾಗೂ ಮೂರನೆಯದು ಹೃದಯದಿಂದ ಬರುವ ಪ್ರೋತ್ಸಾಹ, ಇದು ನಿಜವಾದ ಪ್ರೋತ್ಸಾಹ ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ ವಿವಿ ಕುಲಸಚಿವ ಎಂ.ಕೆ.ಲೋಕೇಶ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಕೆ.ಎಂ. ಪಕ್ಕಳ ಪ್ರಧಾನ ಕಾರ್ಯದರ್ಶಿ ಅಸೋಸಿಯೇಷನ್ ಆಫ್ ಬ್ರಿಟಿಷ್ ಸ್ಕಾಲರ್. ಪ್ರೊ. ವೈ. ನಾರಾಯಣ್ ಕಾರ್ಯದರ್ಶಿ ಅಸೋಸಿಯೇಷನ್ ಆಫ್ ಬ್ರಿಟಿಷ್ ಸ್ಕಾಲರ್ಸ್‌ನ ಹಾಗೂ ಸ್ಮಿತಾ ಹೆಗಡೆ ಕಾರ್ಯದಲ್ಲಿ ಭಾಗವಹಿಸಿದ್ದರು.

## ಸಂಪಾದಕೀಯ

# ಮರೆಯಾದ ಅಮ್ಮ

ಭಾರತದ ರಾಜಕಾರಣದ ವರ್ಣರಂಜಿತ ವ್ಯಕ್ತಿತ್ವವೆನಿಸಿದ್ದ ಜೆ ಜಯಲಲಿತ ಕಾಲದ ಕರೆಗೆ ಓಗೊಟ್ಟು ಚಿರನಿದ್ರೆಗೆ ಜಾರಿದ್ದಾರೆ. ಅವರ ನಿಧನದೊಂದಿಗೆ ತಮಿಳುನಾಡಿನ ರಾಜಕಾರಣದ ಚಾರಿತ್ರಿಕ ಅಧ್ಯಾಯವೊಂದು ಅಂತ್ಯಗೊಂಡಿದೆ. ಮೇಲುಕೋಟೆಯಲ್ಲಿ ಹುಟ್ಟಿ, ಮೈಸೂರು ಬೆಂಗಳೂರಿನಲ್ಲಿ ಬಾಲ್ಯ ಕಳೆದು, ಕನ್ನಡದ ಮೂಲಕವೇ ಚಿತ್ರರಂಗ ಪ್ರವೇಶಿಸಿ ದಕ್ಷಿಣದ ಎಲ್ಲಾ ಭಾಷೆಗಳ ಸಿನಿಮಾಗಳಲ್ಲಿ ಬೆಳಗಿ ತಮಿಳು ಜನರ ಹೃದಯ ಕದ್ದ ಜಯಲಲಿತ ಬದಲಾದ ರಾಜಕೀಯ ಸಂದರ್ಭ ಬಳಸಿಕೊಂಡು ಎತ್ತರಕ್ಕೆ ಬೆಳೆದವರು. ಮಹಿಳೆಯೆಂಬ ಚೌಕಾಶಿ ಬಯಸದೆ ದಿಟ್ಟ ನಡೆ ನುಡಿಗಳ ಮೂಲಕ ಎಐ–ಡಿಎಂಕೆಯ ಸಾಮ್ರಾಜ್ಞಿಯಂತೆ ಮೆರೆದದ್ದು, ಆರು ಬಾರಿ ಸಿಎಂ ಆಗಿದ್ದು ರಾಜಕೀಯವಾಗಿ ಸಾಕಷ್ಟು ಏಳುಬೀಳುಗಳನ್ನು ಕಂಡಿದ್ದು ಇತಿಹಾಸ. ಸಿನಿಮಾ ನಟಿಯಾಗಿದ್ದವರು ರಾಜಕಾರಣದಲ್ಲೂ ಸೈ ಎನಿಸಿಕೊಂಡು ರಾಜ್ಯವೊಂದರ ಚುಕ್ಕಾಣಿ ಹಿಡಿದು ದಶಕಗಳ ಕಾಲ ಮುನ್ನಡೆಸುವುದು ಹಾಗೂ ಮಹಿಳೆಯರು ಮತ್ತು ಬಡವರ ಪಾಲಿನ ಆರಾಧ್ಯ ದೈವವಾಗಿ ಅಸಂಖ್ಯಾತ ಅಭಿಮಾನಿಗಳನ್ನು ಸಂಪಾದಿಸುವುದು ಸಣ್ಣ ಸಂಗತಿಯಲ್ಲ. ಅವರ ಈ ದಾರಿ ಹೂವಿನ ಹಾಸಿಗೆಯಂತೂ ಆಗಿರಲಿಲ್ಲ. ಸಾಕಷ್ಟು ಕಲ್ಲು ಮುಳ್ಳುಗಳಿದ್ದವು. ಸಂಕೋಚ, ನೋವು, ಅವಮಾನಗಳೆಲ್ಲವನ್ನೂ ಮೆಟ್ಟಿ ನಿಂತು ರಾಜಕಾರಣದಲ್ಲಿ ಅವರು ಬೆಳೆದು ಬಂದ ಬಗೆ ಅವರ ಕಾರ್ಯವೈಖರಿ, ಆಲೋಚನಾ ವಿಧಾನ ಗುಣಾವಗುಣಗಳು ಹೀಗೆ ಯಾವ ದೃಷ್ಟಿಯಿಂದಲೂ ನೋಡಿದರೂ ಅವರನ್ನು ಇನ್ನೊಬ್ಬರ ಜೊತೆ ಹೋಲಿಸಲು ಸಾಧ್ಯವಿಲ್ಲ. ಅವರಿಗೆ ಅವರೇ ಸಾಟಿ.

ಜನಪ್ರಿಯ ಯೋಜನೆಗಳ ಅಲೆಯಲ್ಲಿ ಅಧಿಕಾರಕ್ಕೇರಿ ಆ ಜನಪ್ರಿಯತೆ ಕಾಯ್ದಿಟ್ಟುಕೊಳ್ಳುವ ವಿಷಯದಲ್ಲಿ ಉತ್ತಮ ಮಾದರಿ. ಆದರೆ ಆಂತರಿಕ ಪ್ರಜಾಪ್ರಭುತ್ವಕ್ಕೆ ಆಸ್ಪದವಿಲ್ಲದೆ ಸರ್ವಾಧಿಕಾರಿ ಮನೋಧರ್ಮದ ಆಡಳಿತ ವೈಖರಿಯಲ್ಲಿ ಅವರು ಕೆಟ್ಟ ನಿದರ್ಶನ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ನ್ಯಾಯ ಸಮರ ನಿಭಾಯಿಸುವ ಛಾತಿಯ ವಿಷಯದಲ್ಲೂ ಮಾದರಿ ವ್ಯಕ್ತಿತ್ವವೇನಲ್ಲ. ಪರ್ಯಾಯ ನ್ಯಾಯಕತ್ವಕ್ಕೆ ಆಸ್ಪದವಿಲ್ಲದಂತೆ 'ಜಿ ಹುಜೂರ್' ಪಡೆ ಕಟ್ಟಿಕೊಂಡಿದ್ದರ ಪರಿಣಾಮ ಏನೆನ್ನುವುದು ಜಯ ಹಾಸಿಗೆ ಹಿಡಿದ ದಿನದಿಂದ ನಿರ್ಗಮನದವರೆಗಿನ ಬೆಳವಣಿಗೆಗಳಲ್ಲಿ ಎದ್ದು ಕಾಣಿಸಿದೆ. ದೀರ್ಘ ಮುಸುಕಿನ ಕಾಳದ ನಂತರ ಜಯ ನಂಬಿಕಸ್ಥ ಒ ಪನ್ನೀರ್ ಸೆಲ್ವಂ ಉತ್ತರಾಧಿಕಾರಿಯಾಗಿ, ಸದ್ಯದ ರಾಜಕೀಯ ಬಿಕ್ಕಟ್ಟು ತಪ್ಪಿಸಿದ್ದಾರೆ. ಜಯಲಲಿತ ನಿರ್ಗಮನದ ರಾಜ–ಕೀಯ ಪಕ್ವವಾಗಿ ಎಐಡಿಎಂಕೆಯಲ್ಲಿ ಶೂನ್ಯವನ್ನೇ ಸೃಷ್ಟಿಸಿದಂತಾಗಿದೆ.ಆದರೆ ಅವರ ರಾಜಕೀಯ ಪಕ್ಷದಲ್ಲಿ ಅದೇನೂ ಹೊಸದಲ್ಲ.ಜಯಲಲಿತಾ ಅವರ ರಾಜಕೀಯ ಗುರು ಎಂ.ಜಿ ರಾಮಚಂದ್ರನ್ ನಿಧನರಾದ ಸಂದರ್ಭದಲ್ಲಿಯೂ ಇಂಥದೇ ಪರಿಸ್ಥಿತಿ ಇತ್ತು. ರಾಜಕೀಯವಾಗಿ ಜಯಲಲಿತಾ ಆಗ ಅಷ್ಟೇನೂ ತಿಳಿದಿರಲಿಲ್ಲ.ಆದರೂ ಮೂರೇ ವರ್ಷದಲ್ಲಿ ಪಕ್ಷವನ್ನು ಗಟ್ಟಿ ಮಾಡಿ ಚುನಾವಣೆಯಲ್ಲಿ ಗೆದ್ದರು.ಆದರೆ ಟೀಕೆಗಳನ್ನು ಸಹಿಸದಂತಹ ಜಯಲಲಿತಾ ಬೆಳೆಸಿದಂತಹ ರಾಜಕಾರಣದ ಮಾದರಿಯಲ್ಲಿ ಎರಡನೇ ಹಂತದ ನಾಯಕರನ್ನು ಬೆಳೆಸುವ ಪ್ರಶ್ನೆಯೇ ಇಲ್ಲ ಎನ್ನಬಹುದು.

ತಮಿಳುನಾಡಿನ ರಾಜಕೀಯ ಭವಿಷ್ಯವನ್ನು ಊಹಿಸಿಕೊಳ್ಳುವುದು ಕಷ್ಟ ಜನರ ಬೃಹತ್ ಅಭಿಮಾನಕ್ಕೆ ಸಿ.ಎಂ ಆಗಿ ರಾಜ್ಯದ ಗೌರವಕ್ಕೆ ಜಯಲಲಿತಾ ಅರ್ಹ. ಆದರೆ ಅವರ ವಿರುದ್ಧದ ಕೆಲ ಭ್ರಷ್ಟಾಚಾರ ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದ್ದಾಗಲೂ ರಾಷ್ಟ್ರೀಯ ಗೌರವ ಸಲ್ಲಿಸುವುದರ ಔಚಿತ್ಯವೇನು,ಇದು ಸಮಾಜಕ್ಕೆ ಯಾವ ಸಂದೇಶ ನೀಡಬಹುದೆಂಬ ಪ್ರಶ್ನೆ ಎದ್ದಿದೆ.ತವರಿನ ಜನರ ಬಾಯಾರಿಕೆಗೆ ಅವರು ಸ್ಪಂದಿಸಿರಲಿಲ್ಲ ಎಂಬ ಸಂಗತಿ ಆಗಾಗ ಕರ್ನಾಟಕದ ಜನರ ಆಕ್ರೋಶಕ್ಕೂ ಕಾರಣವಾಗಿದೆ. ಆದರೆ ಸಿ.ಎಂ ಆಗಿ ತನ್ನ ರಾಜ್ಯದ ಹಿತದ ವಿಷಯದಲ್ಲಿ ಅವರು ರಾಜಿ ಆದವರಲ್ಲ.ಚತುರ ನಡೆಗಳ ಮೂಲಕವೇ ದೇಶವಷ್ಟೇ ಅಲ್ಲ ಜಗತ್ತೇ ತಿರುಗಿ ನೋಡುವಂಥ ನಾಯಕಿಯಾಗಿ ಬೆಳೆದದ್ದು ಕನ್ನಡಿಗರಿಗೂ ಅಭಿಮಾನ ಪಡಬೇಕಾದ ಸಂಗತಿ.ಆದ್ದರಿಂದಲೇ ಅವರ ಸಾವಿನ ದು:ಖದಲ್ಲಿ ಕರ್ನಾಟಕ ಭಾಗಿಯಾಯಿತು.ಎರಡೂ ರಾಜ್ಯಗಳ ಸಂಬಂಧ ಕಾವೇರಿ ವೈರವನ್ನು ಮೀರಿ ಸೌಹಾರ್ದಯುತವಾಗುವಂಥ ದಿನಗಳು ಬರಲಿ.

## ಸಂಪಾದಕರಿಗೆ ಪತ್ರ

### ನೀರು ಮತ್ತು ಕಸದ ಬುಟ್ಟಿಯ ಸೌಕರ್ಯ ಒದಗಿಸಿ

ಭಾರತದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಮಂಗಳೂರು ವಿ.ವಿ.ಯು ಒಂದು ಹಾಗೂ ನ್ಯಾಕ್ ನಿಂದ 'ಎ' ಗ್ರೇಡ್ ಮಾನ್ಯತೆ ಪಡೆದ ಹೆಗ್ಗಳಿಕೆಯು ಕೂಡ ಇದೆ. ಈ ಪ್ರಸಿದ್ಧ ವಿ.ವಿ.ಯ ಕ್ಯಾಂಪಸ್ ನಲ್ಲಿ ಅನೇಕ ಪ್ರತಿಭಾನ್ವಿತ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಇಂತಹ ವಿ ವಿ ಕ್ಯಾಂಪಸ್‌ನಲ್ಲಿ, ಕಸದ ಬುಟ್ಟಿಗಳ ಸಮಸ್ಯೆ ಕಾಡುತ್ತಿದೆ. ವಿದ್ಯಾರ್ಥಿಗಳು ಕಸದ ಬುಟ್ಟಿ ಇಲ್ಲದೆ ಎಲ್ಲೆಂದರಲ್ಲಿ ಕಸವನ್ನು ಎಸೆಯುತ್ತಿದ್ದಾರೆ. ಹಾಗೂ ಇನ್ನೊಂದು ಪ್ರಮುಖವಾದ ಸಮಸ್ಯೆ ನೀರಿನ ಸಮಸ್ಯೆ. ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಲಭ್ಯವಾಗದೆ, ಹೆಚ್ಚಿನವರು ಹಣ ತೆತ್ತು ಅಂಗಡಿಯಿಂದ ಮತ್ತು ತಮ್ಮ ಮನೆಯಿಂದ ನೀರು ತೆಗೆದುಕೊಂಡು ಬರುತ್ತಿದ್ದಾರೆ. ಅದಲ್ಲದೆ ಕುಡಿಯುವ ನೀರಿಗಾಗಿ ಪೂರೈಸಿರುವ ವಾಟರ್ ಪ್ಯೂರಿಫೈಯರ್ ಸರಿಯಾಗಿ ಕಾರ್ಯವೆಸಗದೆ ವಿದ್ಯಾರ್ಥಿಗಳು ನೀರಿಗಾಗಿ ಪರದಾಡುವಂತಾಗಿದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಕ್ರಮ ಕೈಗೊಂಡು ನೀರು ಮತ್ತು ಕಸದಬುಟ್ಟಿಯ ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿದೆ.

ಶಿಲ್ಪ ಆಚಾರ್ಯ

# "ದಕ್ಷಿಣ ಕನ್ನಡದ ಪ್ರಾಕೃತಿಕ ಸ್ಥಿತಿಗತಿಗಳ ಮೇಲೆ ಸರಕಾರದ ವರದಿಗಳು" ಸಾಧಕ ಬಾಧಕಗಳು

ಪರಶುರಾಮ ಸೃಷ್ಟಿ ಎಂದೇ ಖ್ಯಾತವಾದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಅಪಾಯ ರಹಿತ ಪ್ರದೇಶವೆಂಬ ಪಾರಂಪ–ರಿಕ ನಂಬಿಕೆ ನಮ್ಮ ಮನದಲ್ಲಿ ದೃಢವಾಗಿ ಬೇರೂರಿದೆ. ಆದರೆ, ಇಂದು ಈ ಪ್ರದೇಶದ ಮೇಲೆ ಪ್ರಭಾವ ಬೀರುತ್ತಿರುವ ಆಧುನಿಕ ವಿದ್ಯಾಮಾನಗಳನ್ನು ಗಮನಿಸಿದರೆ ಈ ನಂಬಿಕೆಗೆ ಹಾನಿಯಾಗುವ ಮುನ್ಸೂಚನೆಗಳು ಗೋಚರಿಸದಿರದು. ಒಂದು ಕಾಲದಲ್ಲಿ ಯಥೇಚನೀರ ಸೆಲೆ ಇದ್ದ ಈ ನಾಡು ಇಂದು ಕುಡಿಯುವ ನೀರಿನ ಕ್ಷಾಮ ಎದುರಿಸುತ್ತಿದೆ. ಪಾರಂಪರಿಕ ಭತ್ತದ ಕೃಷಿ ನಾಶವಾಗಿ ವಾಣಿಜ್ಯ ಬೆಳೆಗಳೇ ಮೇಲುಗೈ ಸ್ಥಾಪಿಸಿವೆ. ಉಷ್ಣವಿದ್ಯುತ್‌ಸ್ಥಾವರಗಳು, ಎಸ್‌ಇಝಡ್ ಮುಂತಾದ ಆಧುನಿಕ ಅಭಿವೃದ್ಧಿ ಯೋಜನೆಗಳು, ಹಳ್ಳಿಗಳಿಂದ ನಗರಗಳಿಗೆ ವಲಸೆ ಬರುವವರ ಸಂಖ್ಯೆಯಲ್ಲಾದ ಹೆಚ್ಚಳ, ಮುಂಜಾಗರೂಕತೆಯ ಕೊರತೆಯಿಂದಾದ ನಗರೀಕರಣದ ಸಮಸ್ಯೆ, ಅವೈಜ್ಞಾನಿಕ–ಅಪ್ರಾಯೋಗಿಕ ತ್ಯಾಜ್ಯ ವಿಲೇವಾರಿಯ ಸಮಸ್ಯೆಗಳು ನಮ್ಮನ್ನು ಪೆಡಂಭೂತವಾಗಿ ಕಾಡುತ್ತಿವೆ.

ದಕ್ಷಿಣ ಕನ್ನಡದ ಪಶ್ಚಿಮ ಘಟ್ಟ ಶ್ರೇಣಿಯ ಭೂಭಾಗವನ್ನು ರಕ್ಷಿಸುವ ಭರಾಟೆಯಲ್ಲಿ ಸರಕಾರ ಹಲವಾರು ವರದಿ, ಯೋಜನೆಗಳನ್ನು ಜಾರಿಗೆ ತರುತ್ತಿವೆ. ಅವುಗಳಲ್ಲಿ ಮುಖ್ಯ ಯೋಜನೆಗಳೆಂದರೆ,

ನೀರಿ ಯೋಜನೆ, ಇದು ನೇತ್ರಾವತಿಯನ್ನು ಉಳಿಸಿಕೊಳ್ಳುವುದಕ್ಕೆ ಮಂಗಳೂರು ಮೀನುಗಾರಿಕಾ ಮಹಾವಿದ್ಯಾಲಯ ಪ್ರಕಟಿಸಿದ ವರದಿ. ಪರಮಶಿವಯ್ಯ ವರದಿ, ನೇತ್ರಾವತಿ ನದಿ ತಿರುವು ಯೋಜನೆ ದಕ್ಷಿಣ ಕನ್ನಡ ಜಿಲ್ಲೆಗೆ ಹೊಸ ವಿಷಯವಾಗಿತ್ತು. ಆದ್ದರಿಂದ ಜಿಲ್ಲೆಯ ವಿವಿಧ ಭಾಗಗಳಿಂದ ಹಲವಾರು ಟೀಕೆಗಳು ಬಂದಿದ್ದವು. ಇಂದಿಗೂ ಬರುತ್ತಲೇ ಇವೆ.

ಎತ್ತಿನ ಹೊಳೆ ತಿರುವು ಯೋಜನೆ: ಕರ್ನಾಟಕ ನೀರಾವರಿ ನಿಗಮ ರಚಿಸಿರುವ ಈ ಯೋಜನೆಯ ಸಾರಾಂಶ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ 24 ಟಿಎಮ್‌ಸಿ ನೀರನ್ನು ಕುಡಿಯುವ ನೀರಿನ ಪೂರೈಕೆ ಎಂಬ ಹೆಸರಿನಲ್ಲಿ ಪೂರೈಸುವುದು. ಆರಂಭದಲ್ಲಿ ಸ್ಕೀಂ ಫಾರ್ ಡೈವರ್ಷನ್ ಆಫ್ ಫ್ಲಡ್ ವಾಟರ್ ಫ್ರಮ್ ಸಕಲೇಶಪುರ ಟು ಕೋಲಾರ/ಚಿಕ್ಕಬಳ್ಳಾಪುರ ಎಂಬ ಹೆಸರು ಹೊಂದಿತ್ತು. ಪಶ್ಚಿಮಘಟ್ಟ ನಾಶ ಮಾಡುವಂತಹ ಯೋಜನೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ ಅನುಮತಿ ನೀಡುವುದಿಲ್ಲ ಎಂಬುದನ್ನು ಅರಿತ ರಾಜ್ಯ ಸರ್ಕಾರ ಈ ಯೋಜನೆಯ ಹೆಸರನ್ನೇ 'ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ' ಎಂದು ಬದಲಿಸಿಕೊಂಡಿದೆ.

ಪಶ್ಚಿಮ ವಾಹಿನಿ ಯೋಜನೆ, ನೇತ್ರಾವತಿ ನೀರಿನ ಮೂಲದಿಂದ ಬಯಲುಸೀಮೆ ಜಿಲ್ಲೆಗೆ ನೀರು ಹರಿಸುವ ರಾಜ್ಯ ಸರ್ಕಾರದ ಯೋಜನೆ.

ಕಸ್ತೂರಿ ರಂಗನ್ ವರದಿ, ಮಾಧವ ಗಾಡ್ಗೀಳ್ ವರದಿ ಜಾರಿಗೆ ಬರುವುದನ್ನು ಪಶ್ಚಿಮ ಘಟ್ಟಗಳ ಆರು ರಾಜ್ಯಗಳು ವಿರೋಧಿಸಿದ್ದವು. ಆದ್ದರಿಂದ ಹಿರಿಯ ಪರಿಸರ ವಿಜ್ಞಾನಿ ಗಾಡ್ಗೀಳ್ ನೀಡಿದ್ದ ವರದಿಯನ್ನು ಮರುಪ–ರಿಶೀಲನೆ ಮಾಡಲು ಕೇಂದ್ರ ಯೋಜನಾ ಆಯೋಗದ ಸದಸ್ಯರಾಗಿದ್ದ ಬಾಹ್ಯಾಕಾಶ ವಿಜ್ಞಾನಿ ಕಸ್ತೂರಿ ರಂಗನ್ ನೇತೃತ್ವದಲ್ಲಿ ಹೊಸ ತಂಡವನ್ನು ರಚಿಸಲಾಯಿತು.

ಕಸ್ತೂರಿ ರಂಗನ್ GPRS (ಅಧಿಕ ಸಾಮರ್ಥ್ಯದ ದೂರಸಂವೇದಿ ಉಪಕರಣಗಳ) ಸಹಾಯದಿಂದ ದಕ್ಷಿಣ–ಕನ್ನಡದ ಪಶ್ಚಿಮ ಘಟ್ಟಗಳ ಬಗೆಗೆ ನಡೆಸಿದ ಸಮೀಕ್ಷೆಯ ಪ್ರಕಾರ, ನೈಸರ್ಗಿಕ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಶಾಖೋತ್ಪನ್ನ ಸ್ಥಾವರ, ಗಣಿಗಾರಿಕೆ, ನಗರೀಕರಣ, ಕೃಷಿಯಲ್ಲಿ ವಿಷಕಾರಕ ಕೀಟನಾಶಕ, ಕಳೆನಾಶಕ ಸಿಂಪಡಿಸುವಂತಹ ಚಟುವಟಿಕೆಗಳನ್ನು ಈ ವರದಿ ನಿಷೇಧಿಸುತ್ತದೆ.

ಕಸ್ತೂರಿ ರಂಗನ್ ವರದಿಯ ಸಮಸ್ಯೆ ಏನೆಂದರೆ ಇಂತಹ ನಿರ್ಬಂಧಗಳಿಂದ ಜನರು ವಲಸೆ ಹೋಗುವುದು ಅನಿವಾರ್ಯವಾಗುತ್ತದೆ. ಹೀಗೆ ತಲೆತಲಾಂತರದಿಂದ ಕಾಡಿನಲ್ಲಿಯೇ ವಾಸಮಾಡುತ್ತಿದ್ದಂತಹ ಮಲೆಕುಡಿಯರು ಮುಂತಾದವರೇ ಏಕಾಏಕಿ ಹೋಗಿ ಎಂದರೆ ಅವರೆಲ್ಲಿಗೆ ಹೋಗುವುದುದು ಎಂಬ ಗೊಂದಲ ಮೂಡುತ್ತದೆ.

ಗುಂಡ್ಯ ಜಲವಿದ್ಯುತ್ ಯೋಜನೆ: ಹಾಸನ ಜಿಲ್ಲೆಯ ಸಕಲೇಶಪುರದಲ್ಲಿರುವ ಕರ್ನಾಟಕ ಪವರ್ ಕಾರ್ಪೋರೇಷನ್ ಲಿಮಿಟೆಡ್ ಪ್ರಸ್ತುತ ಪಡಿಸಿದ ಗುಂಡ್ಯ ಜಲ ವಿದ್ಯುತ್ ಯೋಜನೆ ವರದಿಯ ಪ್ರಕಾರ ಈ ಯೋಜನೆಗೆ 1041.04 ಹೆಕ್ಟೇರ್ ಭೂಪ್ರದೇಶದ ಅಗತ್ಯತೆ ಇದೆ. ವಿವಿಧ ಸಸ್ಯ ಸಂಕುಲಗಳು, ನಿತ್ಯಹರಿದ್ವರ್ಣ ಕಾಡುಗಳು, ಹುಲ್ಲುಗಾವಲು ಪ್ರದೇಶ, ಖಾಸಗಿ ತೋಟಗಳಿಂದ ಈ ಪ್ರದೇಶ ಸಮೃದ್ಧವಾಗಿದೆ. ಈ ಯೋಜನೆ ಸಂಪೂರ್ಣವಾಗಿ ನೀರಿನ ಆಕರಗಳ ಅಗತ್ಯತೆ ಇರುವುದರಿಂದ, ಹೊಂಗದಹಳ್ಳ, ಕೆರೆಹೊಳೆ ಮತ್ತು ನೇತ್ರಾವತಿ ನದಿಯ ಪ್ರಮುಖ ಉಪನದಿಯಾಗಿರುವ ಗುಂಡ್ಯಾ ನದಿಗಳಿಗೆ ಅವಲಂಬಿತವಾಗಿದೆ. ಮತ್ತು ಈ ವಿದ್ಯುತ್ ಘಟಕದಿಂದ ವರ್ಷಕ್ಕೆ 616 ವಾಟ್ ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವುದು ಇದರ ಉದ್ದೇಶ.

ನಂಜುಂಡಪ್ಪ ವರದಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಹಲವಾರು ಉದ್ಯಮಗಳು ತಲೆಯೆತ್ತಿರುವುದರಿಂದ ಜಿಲ್ಲೆ ತಾಂತ್ರಿಕವಾಗಿ, ವೈಜ್ಞಾನಿಕವಾಗಿ ಬಹಳಷ್ಟು ಮುಂದುವರಿದಿದೆ. ಜನಜೀವನವೂ ಈ ರೀತಿಯ ಪರಿಸರಕ್ಕೆ ಹೊಂದಿಕೊಂಡಿದೆ. ಈ ಹವಾಮಾನವನ್ನು ಒಂದು ವರದಿಯ ಆಧಾರದಲ್ಲಿ ಹಠಾತ್ತಾಗಿ ಬದಲಾವಣೆ ಮಾಡುವುದೆಂದರೆ ವಿಪರ್ಯಾಸವೇ ಸರಿ. ಸರಕಾರದ ಈ ರೀತಿಯ ಯೋಜನೆಗಳಿಂದ ಹೊಸ ಪೆಟ್ರೋಲಿಯಂ ಘಟಕಗಳು, ವಿದ್ಯುತ್ ಸ್ಥಾವರಗಳನ್ನು ನಿರ್ಮಿಸುವುದು, ಎಷ್ಟು ಸರಿ? ಜನರು 24*7 ವಿದ್ಯುತ್‌ನ್ನು ಬಯಸುವುದಿಲ್ಲ. 24*7 ಆರೋಗ್ಯವನ್ನು ಬಯಸುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಮೇಘಲಕ್ಷ್ಮಿ ಎಂ

# ಪರಿಸರ ಜಾಗೃತಿಯಲ್ಲಿ ನಮ್ಮ ಪಾತ್ರ

ಜಗತ್ತು ಬೆಳೆದಂತೆ ಮಾನವ ಎಲ್ಲವನ್ನು ತನ್ನ ಮೂಗಿನ ನೇರಕ್ಕೆ ಯೋಚಿಸುತ್ತಾನೆ ಮತ್ತು ತನಗೆ ಬೇಕಾದ ಹಾಗೆ ಎಲ್ಲವನ್ನು ಬಳಸುತ್ತಾನೆ ಅದರಂತೆ ಪರಿಸರವನ್ನು, ಸಂಪನ್ಮೂಲಗಳ ನಿರಂತರ ಬಳಕೆಯಿಂದ ಅದನ್ನು ನಾಶಪಡಿಸುತ್ತಿದ್ದಾನೆ. ಪರಿಸರ ನಾಶವಾದಂತೆ ತನ್ನ ನಾಶವೂ ಇದೆ ಅನ್ನುವುದನ್ನು ಆತ ಮರೆತ. ಅದಕ್ಕೆ ತಕ್ಕಂತೆ ಪ್ರಕೃತಿಯು ಆಟವಾಡತೊಡಗಿತು. ಅದರ ಪರಿಣಾಮವೇ ಪ್ರಕೃತಿ ವಿಕೋಪ, ಭೂಕಂಪ, ಜಾಗತಿಕ ತಾಪಮಾನ ಇತ್ಯಾದಿ.... ಕೊನೆಗೂ ಇದರಿಂದ ಎಚ್ಚೆತ್ತ ಮನುಕುಲ ಇಂದು ಪರಿಸರ ಜಾಗೃತಿಯತ್ತ ಹೆಜ್ಜೆ ಇಡಲಾರಂಭಿಸಿದೆ. 1972ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಜುಲೈ 5 ರಂದು ವಿಶ್ವ ಪರಿಸರ ದಿನವನ್ನಾಗಿ ಘೋಷಣೆ ಮಾಡಿದು ಇದೇ ಪರಿಸರ ಜಾಗೃತಿಯ ಕಾರಣಕ್ಕಾಗಿ ಈ ಮೂಲಕ ಪರಿಸರ ಜಾಗೃತಿ ವಿಶ್ವದಾದ್ಯಂತ ಆರಂಭವಾಯಿತು. ಪ್ರತಿ ವರ್ಷ ವಿಶ್ವ ಪರಿಸರ ದಿನದಂದು ಪರಿಸರ ಘೋಷಣೆಗಳನ್ನು ಮಾಡಾಗುತ್ತದೆ ಈ ಘೋಷಣೆ ಅನುಗುಣವಾಗಿ ಆ ವರ್ಷದಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಶಾಲಾ ಕಾಲೇಜು, ಸರಕಾರಿ ಕಚೇರಿ ಇತ್ಯಾದಿ ಜಾಗಗಳಲ್ಲಿ ಜುಲೈ 5 ವಿಶ್ವ ಪರಿಸರ ದಿನದಂದು ಗಿಡಗಳನ್ನು ನೆಡುವುದರ ಮೂಲಕ ವನಮಹೋತ್ಸವವನ್ನು ಆಚರಿಸಲಾಗುತ್ತದೆ.

ಇಂಗಾಲ ಡೈ ಆಕ್ಸೈಡ್‌ನ್ನು ತೆಗೆದುಕೊಂಡು ನಮಗೆ ಆಮ್ಲಜನಕ ನೀಡುವ ಮರಗಳನ್ನು ಇಂದು ನಾವು ನಿರ್ದಯವಾಗಿ ಕಡಿದು ಹಾಕುತ್ತೇವೆ ಹಾಗೂ ಅದರ ಪರಿಣಾಮವನ್ನು ಕೂಡಾ ನಾವೇ ಎದುರಿಸಬೇಕಾಗುತ್ತದೆ. ನಿರಂತರ ಕಾಡುಗಳ ನಾಶದಿಂದ ವಾತಾವರಣದಲ್ಲಿ ಅಧಿಕ ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ಸಂಗ್ರಹವಾಗುತ್ತದೆ. ಇದು ವಾತಾವರಣದ ತಾಪವನ್ನು ಹೆಚ್ಚಿಸುತ್ತದೆ.

ಭಾರತವೂ ಕೂಡಾ ಜಾಗತಿಕ ತಾಪಮಾನದ ಬಿಸಿಗೆ ಒಳಗಾಗಿದೆ. ಜಾಗತಿಕ ತಾಪಮಾನಕ್ಕೆ ಒಳಗಾದ ದೇಶಗಳು ಪ್ಯಾರಿಸ್ಸಿನಲ್ಲಿ ನಡೆದ 2016 ರ ಶೃಂಗಸಭೆ ಸೇರಿ ಜಾಗತಿಕ ತಾಪಮಾನ ನಿವಾರಿಸುವ ಒಪ್ಪಂದಗಳನ್ನು ಕೈಗೊಂಡರು. ಪರಿಸರವನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ಅನೇಕ ಕಾಯ್ದೆಯನ್ನು ಜಾರಿಗೆ ತರುವುದರ ಮೂಲಕ ಪರಿಸರ ಜಾಗೃತಿಯನ್ನು ಮಾಡುತ್ತಿದೆ. ಇಂದು ಪರಿಸರ ಜಾಗೃತಿಗೆ ಮುಂದಾಗಿರುವ ನಾವು ಪರಿಸರ ಮಾಲಿನ್ಯಕ್ಕೂ ನಾವೇ ಕಾರಣ–ಕರ್ತರು. ಜಲ, ವಾಯು, ಶಬ್ದ ಮಾಲಿನ್ಯದ ಮೂಲಕ ಪರಿಸರ ಮಾಲಿನ್ಯಗೊಳಿಸಿದ್ದೇವೆ. ವಾಹನಗಳ ಬಳಕೆಯಲ್ಲಿ ಹೆಚ್ಚಳ, ಕೈಗಾ–ರಿಕೆ, ಕಾರ್ಖಾನೆಗಳಿಂದ ಹೊರ ವಿಷಯುಕ್ತ ಗಾಳಿ ಗಣಿಗಾರಿಕೆ, ಇವೆಲ್ಲ ವಾಯುಮಾಲಿನ್ಯಕ್ಕೆ ಕಾರಣವಾದರೆ. ಕೈಗಾ–ರಿಕೆಗಳ ತ್ಯಾಜ್ಯ ಹರಿವು, ಶಕ್ತಿಕೇಂದ್ರ, ರಾಸಾಯನಿಕ ತ್ಯಾಜ್ಯಗಳು, ಚರಂಡಿ ನೀರು ಶುದ್ಧ ನೀರನ್ನು ಕಲುಷಿತಗೊಳಿಸಿ ಜಲಮಾಲಿನ್ಯಕ್ಕೆ ಕಾರಣವಾಗುತ್ತದೆ. ಪರಿಸರ ಮಾಲಿನ್ಯವು ರೋಗಗಳ ಸರಮಾಲೆಗಳನ್ನು ತರುತ್ತದೆ.ಶ್ವಾಸಕೋಶದ ಕಾಯಿಲೆಗಳು, ಕ್ಯಾನ್ಸರ್, ಹೃದಯದ ಕಾಯಿಲೆಗಳು, ಮದುಳು, ನರ, ಅತಿಸಾರ, ಕಾಲಾರ, ಇತ್ಯಾದಿ ರೋಗಗಳು ಪರಿಸರ ಮಾಲಿನ್ಯದಿಂದ ಉಂಟಾಗುತ್ತದೆ. ಜಲಮಾಲಿನ್ಯದಿಂದ ಪ್ರವಾಸೋದ್ಯಮಕ್ಕೂ ಅಡ್ಡಿ ಉಂಟಾಗಬಹುದು. ಇವುಗಳೆಲ್ಲದ–ರಿಂದ ಪಾರಾಗಲು ನಾವು ಪರಿಸರ ಸಂರಕ್ಷಣೆ ಮಾಡಬೇಕಾಗಿದೆ. ಪರಿಸರ ಜಾಗೃತಿ ಮೂಡಿಸುವಲ್ಲಿ ಪರಿಸರ ಶಿಕ್ಷಣ ಮಹತ್ವದ ಪಾತ್ರವಹಿಸುತ್ತದೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ವೃತ್ತಿಶಿಕ್ಷಣವರೆಗೂ ಪರಿಸರ ಶಿಕ್ಷಣ ನೀಡಬೇಕಾಗುತ್ತದೆ. ಇಲ್ಲಿ ಪರಿಸರ ಸಮಸ್ಯೆಗಳು , ಅದರ ಪರಿಹಾರ ಇವುಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ. ಪರಿಸರ ಜಾಗೃತಿ ಮೂಡಿಸುವ ಉದ್ದೇಶದಲ್ಲಿ ರಾಷ್ಟ್ರೀಯ ಪರಿಸರ ಜಾಗೃತಿ ಕಾರ್ಯಚರಣೆಯನ್ನು 1986ರಲ್ಲಿ ರಾಷ್ಟಮಟ್ಟದಲ್ಲಿ ಪ್ರಾರಂಭವಾಯಿತು. ಮರಗಳನ್ನು ಬೆಳೆಸುವುದು ,ಗೃಹತ್ಯಾಜ್ಯಗಳ ನಿರ್ವಹಣೆ,ನೀರಿನಾಶ್ರಗಳನ್ನು ಶುದ್ಧೀಕ–ರಿಸುವುದು ಇತ್ಯಾದಿಗಳನ್ನು ರಾಷ್ಟ್ರಿಯ ಪರಿಸರ ಜಾಗೃತಿ ಕಾರ್ಯಚರಣೆ ಮಾಡುತ್ತದೆ. ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಅನೇಕ ಪರಿಸರ ಚಳುವಳಿ ನಡೆದಿವೆ ಅವುಗಳೆಂದರೆ ಚಿಪ್ಕೋ ಚಳುವಳಿ ,ಅಪಿಕ್ಕೋ ಚಳುವಳಿ ,ನರ್ಮದಾ ಬಚಾವೋ ಆಂದೋಲನ.

ಮನುಕುಲ ಉಳಿಯಬೇಕಾದರೆ ಪರಿಸರ ಬೇಕೆ ಬೇಕು. ನಾವು ಸೇವಿಸುವ ಆಮ್ಲಜನಕ ಲಭಿಸುವುದು ಪರಿಸರದಿಂದ .ಮುಂದಿನ ಪೀಳಿಗೆ ಪರಿಸರವನ್ನು ಉಳಿಸುವುದು ನಮ್ಮ ಕರ್ತವ್ಯವಾಗಿದೆ.

ಧನ್ಯಶ್ರೀ

# ದಕ್ಷಿಣದ ಕಾಶಿ ಉಪ್ಪಿನಂಗಡಿ

ಪರಶುರಾಮ ಸೃಷ್ಟಿಯ ನಾಡು ಈ ತುಳುನಾಡು. ವಿಭಿನ್ನ ಸಂಸ್ಕೃತಿ, ಸಂಪ್ರದಾಯಗಳ ನೆಲೆಬೀಡು. ದೇವಾಲಯಗಳು, ಬಸದಿಗಳು, ಬ್ರಹ್ಮ ಬೈದ್ಯರ ಗರಡಿಗಳು, ದೈವಾರಾಧನೆ, ನಾಗಾರಾಧನೆ ಈ ನಾಡಿನ ಶಕ್ತಿ. ದೈವೀ ಶಕ್ತಿಯ ಮೂಲವೇ ಈ ತುಳುನಾಡು. ಸರ್ವಧರ್ಮೀಯರು ಸಮನ್ವಯದಿಂದ ಬೆರೆತಿರುವ ಮಸೀದಿ, ಚರ್ಚ್, ದೇವಾಲಯಗಳು ತುಂಬಿರುವ ಪುಣ್ಯಭೂಮಿ. ಹಸಿರ ಗಿರಿವನಗಳ ಪ್ರಕೃತಿ ಮಾತೆಯ ಸೌಂದರ್ಯಕ್ಕೆ ಅಲ್ಲಲ್ಲಿ ನಾಟ್ಯಾರೀತಿಯಲ್ಲಿ ಹರಿಯುವ ನದಿ ಕಾಲುವೆಗಳ ಅಲಂಕಾರ. ಈ ಮಣ್ಣಿನ ಕಣ-ಕಣದಲ್ಲೂ ದೈವ-ದೇವರನ್ನು ಕಾಣುವ ಇಲ್ಲಿನ ಜನತೆ ಸತ್ಯ, ಭಕ್ತಿ, ನಂಬಿಕೆಗಳ ಆಧಾರದಲ್ಲಿ ತಾವು ಮಾಡುವ ಕೆಲಸ-ಕಾರ್ಯಗಳು ದೈವ-ದೇವರಿಗರ್ಪಿತ ಎನ್ನುವ ಭಾವನೆ. ಹೀಗಾಗಿಯೇ ಇಲ್ಲಿ ಸತ್ಯವೊಂದೇ ದೈವ. ಇಲ್ಲಿನ ಹತ್ತು ಹಲವು ಪವಿತ್ರ ಕ್ಷೇತ್ರಗಳಲ್ಲಿ ದಕ್ಷಿಣ-ಕಾಶಿ ಎಂದೇ ಕರೆಯಲ್ಪಡುವ 'ಉಪ್ಪಿನಂಗಡಿ'ಯೂ ಒಂದು.

ಪವಿತ್ರ ನದಿಗಳಾದ ನೇತ್ರಾವತಿ ಮತ್ತು ಕುಮಾರಾಧಾರಾ ನದಿಗಳ ಸಂಗಮ ತಾಣ ಈ ಉಪ್ಪಿನಂಗಡಿ. ಉಪ್ಪು ಮತ್ತು ಭತ್ತ(ಬಾರ್)ಗಳ ವಿನಿಮಯ ಕೇಂದ್ರವಾಗಿದ್ದ; ತುಳುವಿನಲ್ಲಿ 'ಉಬಾರ್' ಎಂದು ಕರೆಸಿಕೊಳ್ಳುವ ಈ ಪಟ್ಟಣವೇ ಉಪ್ಪಿನಂಗಡಿ ಎಂಬ ಸ್ಥಳನಾಮದಿಂದ ಪ್ರಸಿದ್ಧವಾಗಿದೆ. ಹಿಂದಿನ ಕಾಲದಲ್ಲಿ ನದಿಗಳಿಗೆ ಸೇತುವೆಗಳಿಲ್ಲದ ಕಾರಣ ಮಂಗಳೂರಿನಿಂದ ನೇತ್ರಾವತಿ ನದಿಯಲ್ಲಿ ದೋಣಿ ಮೂಲಕ ಉಪ್ಪನ್ನು ಹಾಸನ-ಬೆಂಗಳೂರಿನತ್ತ ಸಾಗಿಸಲಾಗುತ್ತಿತ್ತು. ಮತ್ತೆ ಭತ್ತವನ್ನು ದೋಣಿಗೆ ತುಂಬಿಸಿ ಇಲ್ಲಿಂದ ಕೊಂಡೊಯ್ಯಲಾಗುತ್ತಿತ್ತು. ಆದುದ-ರಿಂದ ಉಪ್ಪು+ಬಾರ್=ಉಬಾರ್ ಎಂದು ಈ ಸ್ಥಳವನ್ನು ಕರೆಯಲಾಯ್ತು. ಇಲ್ಲಿ ಉಪ್ಪಿನ ಅಂಗಡಿಗಳೂ ಇದ್ದುದ-ರಿಂದ ಉಪ್ಪಿನಂಗಡಿ ಎಂದೇ ಪ್ರಸಿದ್ಧಿ ಪಡೆಯಿತು.

ಒಂದು ಕಾಲದಲ್ಲಿ ತಾಲೂಕು ಕೇಂದ್ರವಾಗಿದ್ದ ಈ ಪಟ್ಟಣವು 1923ರಲ್ಲಿ ಭಾರೀ ನೆರೆಹಾವಳಿಗೆ ಒಳಗಾಯಿತು. ಪರಿಣಾಮ ತಾಲೂಕು ಕೇಂದ್ರವು ಪಕ್ಕದ ಪುತ್ತೂರಿಗೆ ವರ್ಗಾವಣೆಗೊಂಡಿತು. ಪ್ರಸ್ತುತ ಉಪ್ಪಿನಂಗಡಿ ಪಟ್ಟಣವು ಪುತ್ತೂರು ತಾಲೂಕಿನ ಎರಡನೇ ದೊಡ್ಡ ಪಟ್ಟಣ. ಅಷ್ಟೇ ಅಲ್ಲದೇ ಇದು ದಕ್ಷಿಣ ಕನ್ನಡ ಜಿಲ್ಲೆಯ ಮಧ್ಯಭಾಗದಲ್ಲಿರುವ ಕಾರಣ ಇದು ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವೂ ಹೌದು.

ಉಪ್ಪಿನಂಗಡಿಯಲ್ಲಿ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನವಿರುವುದರಿಂದ ಪವಿತ್ರ ತೀರ್ಥಕ್ಷೇತ್ರವಾಗಿ ಹೆಸರುವಾಸಿಯಾಗಿದೆ. ಸಹಸ್ರಲಿಂಗೇಶ್ವರ ನೆಲೆಸಿರುವ ಈ ಸ್ಥಳದಲ್ಲೇ ಪವಿತ್ರ ನೇತ್ರಾವತಿ ಮತ್ತು ಕುಮಾರಾಧಾರಾ ನದಿಗಳು ಸಂಗಮಗೊಳ್ಳುತ್ತದೆ. ಹೀಗಾಗಿಯೇ ಇದು ಗಯಾಪದ ಕ್ಷೇತ್ರ, ದಕ್ಷಿಣ-ಕಾಶಿ ಎಂಬ ಅನ್ವರ್ಥನಾಮದಿಂದ ಕರೆಯಲ್ಪಡುತ್ತದೆ. ಗಂಗೆ-ಯಮುನೆಯರ ಸಂಗಮವಾಗಿ ಪ್ರಯಾಗವೆಂದು ಪ್ರಸಿದ್ಧವಾದ ಉತ್ತರ ಕಾಶಿಯಷ್ಟೇ, ನೇತ್ರಾವತಿ-ಕುಮಾರಾಧಾರಾ ಸಂಗಮ ತಾಣವಾಗಿ



ಸಹಸ್ರಲಿಂಗೇಶ್ವರನ ಸನ್ನಿಧಿ ಉಪ್ಪಿನಂಗಡಿ ಪ್ರಸಿದ್ಧಿ ಪಡೆದಿದೆ. ಉತ್ತರದ ಪ್ರಯಾಗ ದಕ್ಷಿಣದ ಗಯಾಪದ, ಭಕ್ತಿ-ಮುಕ್ತಿಗಳೆರಡನ್ನೂ ಕರುಣಿಸುವ ಈ ಶಕ್ತಿತಾಣ, ಸದ್ಗತಿದಾಯಕ ಕ್ರಿಯೆಗಳ ಮೂಲಕ ಮೋಕ್ಷಧಾಮವೆನಿಸಿದೆ.

ನೇತ್ರಾವತಿ ನದಿಯು ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖದಲ್ಲಿ ಜನಿಸಿ ಧರ್ಮಸ್ಥಳವನ್ನು ಪಾವನಗೊಳಿಸಿ ಮುಂದೆ ಉಪ್ಪಿನಂಗಡಿ ಗಯಾಪದ ಕ್ಷೇತ್ರಕ್ಕೆ ಹರಿದುಬಂದು ದೇವಾಲಯದ ಉತ್ತರ ದಿಕ್ಕಿನಲ್ಲಿ ಕುಮಾರಾಧಾರಾ ನದಿಯನ್ನು ಸೇರುತ್ತದೆ. ಅಂತೆಯೇ ಕುಮಾರಪರ್ವತದಲ್ಲಿ ಹುಟ್ಟುವ ಕುಮಾರಾಧಾರಾ ನದಿಯು ಸುಬ್ರಮಣ್ಯ ಕ್ಷೇತ್ರವನ್ನು ಪಾವನಗೊಳಿಸಿ ದಕ್ಷಿಣ-ಕಾಶಿ ಉಪ್ಪಿನಂಗಡಿಯ ಶ್ರೀ ಸಹಸ್ರಲಿಂಗೇಶ್ವರ ದೇವಳದ ಪಶ್ಚಿಮ ಬದಿಯಿಂದ ಹರಿಯುತ್ತದೆ. ಈ ಎರಡು ನದಿಗಳು ದೇವಾಲಯದ ವಾಯುವ್ಯ ದಿಕ್ಕಿನಲ್ಲಿ ಸಂಧಿಸುತ್ತದೆ. ಮಳೆಗಾಲದ ಸಂದರ್ಭದಲ್ಲಿ ಎರಡೂ ನದಿಗಳಲ್ಲೂ ನೀರು ಉಕ್ಕಿ ಹ-ರಿಯುತ್ತದೆ. ದಡ ಮೀರಿ ಹರಿಯುವ ನೇತ್ರಾವತಿ ಮತ್ತು ಕುಮಾರಾಧಾರಾ ನದಿನೀರು ದೇವಳದ ಮುಂಭಾಗಕ್ಕೆ ಪ್ರವೇಶಿಸುತ್ತದೆ. ಎರಡೂ ನದಿಗಳ ಪ್ರವಾಹವು ದೇವಳದ ಮುಂಭಾಗದಲ್ಲಿ ಸಂಗಮಗೊಳ್ಳುತ್ತದೆ. ಇಂತಹ ಅಪರೂಪದ ಸನ್ನಿವೇಶದಲ್ಲಿ ಅನೇಕ ಭಕ್ತಾದಿಗಳು ಸ್ನಾನ ಮಾಡಿ ಪುನೀತರಾಗುತ್ತಾರೆ.

ಕುಂಭ ಮಾಸದ ಶುದ್ಧ ದ್ವಾದಶಿಯಂದು ಇಲ್ಲಿನ ವರ್ಷಾವಧಿ ಜಾತ್ರೆ ನಡೆಯುತ್ತದೆ. ಮಾಘ ಮಾಸದಲ್ಲಿ ಮಖೆ ಜಾತ್ರೆ ಪ್ರಾರಂಭವಾಗಿ ಮೂರು ಸಲ ಮಖೆ ಜಾತ್ರೆ ಮಾಡಲಾಗುತ್ತದೆ. ಶಿವರಾತ್ರಿ ಮಖೆ, ಹುಣ್ಣಿಮೆ ಮಖೆ, ಅಷ್ಟಮಿ ಮಖೆ ಎಂಬುವುದಾಗಿ ಈ ಮಖೆ ಜಾತ್ರೆಯನ್ನು ಕರೆಯಲಾಗುತ್ತದೆ. ಇದರಲ್ಲಿ ಶಿವರಾತ್ರಿ ಮಖೆ ಅತ್ಯಂತ ಪ್ರಮುಖವಾದದ್ದು. ಈ ಸಂದರ್ಭದಲ್ಲಿ ನೇತ್ರಾವತಿ-ಕುಮಾರಾಧಾರಾ ನದಿಯ ಸಂಗಮ ಸ್ಥಳದಲ್ಲಿ ಸ್ನಾನ ಮಾಡಿ ದೇವರ ದರ್ಶನ ಪಡೆದರೆ ಶುಭವಾಗುತ್ತದೆ ಎಂಬ ನಂಬಿಕೆ ಇದೆ. ನೇತ್ರಾವತಿ ನದಿಯಲ್ಲಿ ಉದ್ಭವ ಲಿಂಗವಿದೆ. ಮಳೆಗಾಲದಲ್ಲಿ ಈ ಲಿಂಗವು ಮರಳಿನಿಂದ ಮುಚ್ಚಿಹೋದರೆ, ಮಳೆಗಾಲ ಮುಗಿದ ಬಳಿಕ ಜನವರಿ ತಿಂಗಳಿನಲ್ಲಿ ಉದ್ಭವ ಲಿಂಗದ ಮೇಲಿನ ಮರಳನ್ನು ತೆರವುಗೊಳಿಸಿ; ಶಿವಲಿಂಗವನ್ನು ಭಕ್ತರ ದರ್ಶನಕ್ಕೆ ಅನುವುಮಾಡಿಕೊಡಲಾಗುತ್ತದೆ. ಮಖೆಜಾತ್ರೆಯ ಸಂದರ್ಭದಲ್ಲಿ ಈ ಉದ್ಭವ ಲಿಂಗಕ್ಕೆ ಸ್ವಯಂ ಅಭಿಷೇಕ ಮಾಡುವ ಸದಾವಕಾಶವನ್ನು ಭಕ್ತರಿಗೆ ನೀಡಲಾಗುತ್ತದೆ.

ದೇವಾಲಯಕ್ಕೆ ಸುಮಾರು 2500 ವರ್ಷಗಳ ಇತಿಹಾಸವಿರುವುದಾಗಿ 1997ರ ಅಷ್ಟಮಂಗಲದ ಪ್ರಕಾರ ತಿಳಿದುಬಂದಿರುವುದಾಗಿ ಹೇಳಲಾಗಿದೆ. ಉತ್ತರದ ಕಾಶಿ ವಿಶ್ವನಾಥ ಕ್ಷೇತ್ರದಂತೆಯೇ, ದಕ್ಷಿಣದಲ್ಲಿ ದಕ್ಷಿಣ-ಕಾಶಿ ಉಪ್ಪಿನಂಗಡಿಯ ಸಂಗಮಕ್ಷೇತ್ರವು ಸತ್ತವರ ಶವ ಸಂಸ್ಕಾರವಾದ ಬಳಿಕ ಚಿತಾಭಸ್ಮವನ್ನು, ಅಸ್ತಿಯನ್ನು ಪುಣ್ಯಕ್ಷೇತ್ರಗಳಲ್ಲಿ ವಿಸರ್ಜಿಸಿ, ಪಿಂಡಪ್ರದಾನ ಮಾಡುವುದಕ್ಕೆ ಹೆಸರುವಾಸಿ. ಹೀಗಾಗಿ ಪಿಂಡಪ್ರದಾನಕ್ಕೆ ಉತ್ತರ ಕಾಶಿಯನ್ನು ಹೊರತುಪಡಿಸಿ ಈ ಸಂಗಮ ಕ್ಷೇತ್ರ ಮಾತ್ರವೇ ಖ್ಯಾತಿ ಪಡೆದ ಕ್ಷೇತ್ರ. ಇದಕ್ಕಾಗಿ ಬೇಕಾಗುವ ಸಕಲ ವ್ಯವಸ್ಥೆಗಳನ್ನೂ ದೇವಾಲಯದಲ್ಲಿ ಕಲ್ಪಿಸಲಾಗಿದೆ. ಹೀಗಾಗಿಯೇ ಈ ಕ್ಷೇತ್ರಕ್ಕೆ ರಾಜ್ಯ ಮಾತ್ರವಲ್ಲದೇ ನೆರೆ ರಾಜ್ಯಗಳಿಂದಲೂ ಭಕ್ತರು ಆಗಮಿಸಿ, ಪಿಂಡಪ್ರದಾನ ನೆರವೇರಿಸಿ, ಮೃತ-ರಿಗೆ ಸದ್ಗತಿಯನ್ನು ಕೋರುತ್ತಾರೆ.. ಆದುದರಿಂದಲೇ ಇದು 'ದಕ್ಷಿಣ ಕಾಶಿ' ಎನಿಸಿರುವುದು.

**-ಜಯರಾಜ್**

# ಬೆಟ್ಟದ ಮೇಲೆ ನರಹರಿ



ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಪುಣ್ಯ ಕ್ಷೇತ್ರಗಳಲ್ಲಿ ಇದು ಒಂದು. ಮಂಗಳೂರಿನಿಂದ ಬಿ.ಸಿ.ರೋಡ್ ಮಾರ್ಗವಾಗಿ ಪುತ್ತೂರಿಗೆ ಹೋಗುವಾಗ 28 ಕಿ.ಮೀ ದೂರ ಪೂರ್ವಕ್ಕೆ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಾಣಸಿಗುತ್ತದೆ. ಸಮುದ್ರ ಮಟ್ಟದಿಂದ ಸುಮಾರು ಸಾವಿರ ಅಡಿಗಳಷ್ಟು ಎತ್ತರದಲ್ಲಿ ಬೆಟ್ಟದ ತುದಿಯಲ್ಲಿ ಈ ಸದಾಶಿವ ದೇವಸ್ಥಾನವು ನೆಲೆಗೊಂಡಿದೆ. ಸುಮಾರು 300 ಮೆಟ್ಟಿಲುಗಳನ್ನು ಏರಿ ದೇವರ ಸನ್ನಿದಾನಕ್ಕೆ ತಲುಪಬೇಕು. ಮೆಟ್ಟಿಲುಗಳನ್ನು ಏರುವ ಹೊತ್ತಿಗೆ ಆಯಾಸ ಮುಗಿಲು ಮುಟ್ಟಿರುತ್ತವೆ. ಬೆಟ್ಟ ಏರಿದೊಡನೆ ಸುತ್ತಲು ಕಣ್ಣು ಹಾಯಿಸಿದಂತೆ ಎಲ್ಲೆಲ್ಲೂ ಹಚ್ಚ ಹಸಿರಿನ ರಮಣೀಯ ನಿಸರ್ಗ ಸೌಂದರ್ಯ ಕಣ್ಣಿಗಾನಂದವನ್ನು ತುಂಬುತ್ತದೆ,'.

ಚಾರಣ ಪ್ರಿಯರ ಸ್ವರ್ಗ ಎಂದೇ ಕರೆಯಲ್ಪಡುವ ಕ್ಷೇತ್ರ ನರಹರಿ ಪರ್ವತ. ಸೂರ್ಯೋದಯದ ಹೊಂಬೆಳಕು, ಆಕರ್ಷಕ ಗ್ರಾಮೀಣ ದೃಶ್ಯಗಳು, ನಿರ್ಮಲ ಪರಿಸರ, ದೊಡ್ಡಗುಡ್ಡ, ಗುಡ್ಡದ ಮೇಲೊಂದು ದೇವಸ್ಥಾನ , ದೇವಸ್ಥಾನದ ಹತ್ತಿರದಲ್ಲಿಯೇ ನಾಲ್ಕು ಪವಿತ್ರ ತೀರ್ಥಗಳು. ಏರುತ್ತಾ ಹೋದಂತೆ ಸುತ್ತಲೂ ಕಾಣುವ ಹಸಿರು ಮರಗಳ ಸಮೃದ್ಧಿ. ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿಯುವುದೇ ಒಂದು ರೀತಿಯ ಸೊಬಗು. ಪ್ರಕೃತಿ ಸೌಂದರ್ಯವನ್ನು ಕುಳಿತು ಕಣ್ತುಂಬಿಕೊಳ್ಳುವ ವ್ಯವಸ್ಥೆಯೂ ಇಲ್ಲಿದೆ.

ಸಾಯಂಕಾಲದ ಹೊತ್ತು ಇಲ್ಲಿಂದ ಸೂರ್ಯಾಸ್ತವನ್ನು ಕಾಣಲು ಅತಿ ಸುಂದರವಾಗಿರುತ್ತದೆ. ಸೂರ್ಯಾಸ್ತದ ಹೊತ್ತು ಬೀಳುವ ಸೂರ್ಯನ ಕಿರಣಗಳು ನರಹರಿ ಪರ್ವತದ ದೇವಸ್ಥಾನವನ್ನಾವರಿಸುತ್ತದೆ. ಬೆಟ್ಟದ ಮೇಲಕ್ಕೆ ಹೋಗಲು ರಸ್ತೆಯು ಇದೆ. ಆದರೆ 330 ಮೆಟ್ಟಿಲುಗಳನ್ನು ಏರುವುದು ಅನಿವಾರ್ಯ.

ಮಹಾಭಾರತ ಕುರುಕ್ಷೇತ್ರದ ಯುದ್ಧದ ಬಳಿಕ ಪಾಂಡವರು ತಮ್ಮ ಪಾಪ ವಿಮೋಚನೆಗಾಗಿ ದಕ್ಷಿಣದ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಬಂದರು. ಹರಿಹರರು ಜೊತೆಯಾಗಿ ಈ ಗಿರಿಯನ್ನು ಏರಿಂದರೆಂದೂ, ಶ್ರೀ ಹರಿಯು ತಾನು ತಂಗಿದ ಕುರುಹಿಗಾಗಿ ತನ್ನ ಆಯುಧದಿಂದ ಶಂಖ, ಚಕ್ರ, ಗದಾ, ಪದ್ಮಾಕಾರಗಳ ತೀಥ-ರ್ಕೆರೆಗಳನ್ನು ನಿರ್ಮಿಸಿದನು.ಎನ್ನಲಾಗಿದೆ. ಈ ತೀರ್ಥಗಳ ಸ್ನಾನದಿಂದ ಬಾಹ್ಯಾಂತರ ಶುಚಿರ್ಭೂತನಾಗಿ ಅರ್ಜುನನು ಶಿಲೆಯಿಂದ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಹರಿ ಸಮೇತನಾಗಿ ಹರನ ಪೂಜೆ ಮಾಡಿ ವರ ಪ್ರಸಾದ ಪಡೆದನೆಂದೂ ಈ ಪರಿಣಾಮವಾಗಿ ಈ ಕ್ಷೇತ್ರವು ನರಹರಿ ಸದಾಶಿವ ಎಂದೂ, ದೇವಸ್ಥಾನವು ಪರ್ವತದ ಮೇಲಿರುವ ಕಾರಣ ನರಹರಿ ಪರ್ವತವೆಂದೇ ಪ್ರತೀತಿ.

ತುಳು ಪರಂಪರೆಯ ಆಷಾಢ (ಆಟಿ) ಅಮವಾಸ್ಯೆ ಮತ್ತು ಸೋಣ (ಶ್ರಾವಣ) ಅಮವಾಸ್ಯೆಯ ದಿನಗಳಂದು ಇಲ್ಲಿ ತೀರ್ಥಸ್ಥಾನ ಮಾಡುತ್ತಾರೆ.



ನಾಲ್ಕು ತೀರ್ಥಕೂಪದಲ್ಲಿ ಮಿಂದು ದೇವರಿಗೆ ಸೇವೆ ಸಲ್ಲಿಸುವುದು ಇಲ್ಲಿನ ವಾಡಿಕೆ. ಶಿವರಾತ್ರಿ, ನಾಗರ ಪಂಚಮಿ, ಗಣೇಶಚೌತಿ ಮೊದಲಾದ ಹಬ್ಬಗಳನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ.

**ಮೇಘಲಕ್ಷ್ಮಿ ಎಂ**

# ಕನ್ನಡಿಗರು ತಾಳ್ಮೆಯ ವ್ಯಕ್ತಿತ್ವದವರು: ಕಾಸರಗೋಡು ಚಿನ್ನ

**ಮಂಗಳಗಂಗೋತ್ರಿ** : ಕನ್ನಡಿಗರು ತಾಳ್ಮೆಯ ವ್ಯಕ್ತಿತ್ವದವರು. ಅವರು ಯಾವ ರಾಜ್ಯ,ಯಾವ ಪ್ರದೇಶಕ್ಕೆ ಹೋದರು ಕನ್ನಡಿಗರು ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿತು ಮಾತನಾಡಬಲ್ಲರು. ಆದರೆ ಅದು ಬೇರೆ ಭಾಷೆಗರಿಂದ ಸಾದ್ಯವಿಲ್ಲ. ಕನ್ನಡಿಗರಂತಹ ವಿಶಾಲ ಮನಸ್ಸು, ಹೃದಯವಂತಿಕೆ ಬೇರೆಯಾರಿಗು ಇಲ್ಲ ಎಂದು ಖ್ಯಾತ ರಂಗಭೂಮಿ ಕಲಾವಿದ ಹಾಗೂ ಬರಹಗಾರ ಕಾಸರಗೋಡು ಚಿನ್ನ ಹೇಳಿದರು.



ಅವರು ಮಂಗಳೂರು ವಿಶ್ವಾವಿದ್ಯಾನಿಲದ ಮಂಗಳಾ ಸಭಾಂಗಣದಲ್ಲಿ ಕನ್ನಡ ವಿಭಾಗದಿಂದ ಆಯೋಜಿಸಲಾದ 61ನೇ ಕನ್ನಡ ರಾಜೋತ್ಸವ "ಕನ್ನಡ ಡಿಂಡಿಮ" ಕಾರ್ಯಕ್ರಮವನ್ನು ಉದ್ದಾಟಿಸಿ ಮಾತನಾಡಿದರು. ಬಳಿಕ ಮಾತನಾಡಿದ ಅವರು ಕೆಟ್ಟ ಸಂಸ್ಕಾರ ಕನ್ನಡಕ್ಕೆ ಸೂಕ್ತವಲ್ಲ. ನಾವು ಭಾಷೆಗೆ ಕೊಡುವ ಕೊಡುಗೆ ಶಾಶ್ವತ. ಕನ್ನಡವನ್ನು ಪ್ರೀತಿಸಿ, ಉಳಿಸಿ ,ಬೆಳೆಸಿದರೆ ಕನ್ನಡ ತಾಯಿ ಸಂತಸಪಡುತ್ತಾಳೆ. ಕಾಸರಗೋಡಿನಲ್ಲಿ ಕರಾಳದಿನ ಆಚರಿಸುತ್ತಿದ್ದೇವೆ. ಕೆ. ಎಂ ಪಣೆಕರ್ ನಂ1 ವಿಲನ್....! ತಮ್ಮ ಸ್ವಾರ್ಥಕ್ಕಾಗಿ ಅದ್ಭುತವಾದ ಕಾಸರಗೋಡು ಕನ್ನಡ ಪ್ರದೇಶವನ್ನು ಅನ್ಯಾಯವಾಗಿ ಕೇರಳಕ್ಕೆ ಸೇರಿಸಿಕೊಂಡರು. 3-4 ವರ್ಷದಿಂದ ಕನ್ನಡರಾಜೋತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಳುವ ಮೂಲಕ ಭಾರತ ಮಾತೆಗೆ ಗೌರವ ಸಲ್ಲಿಸಲು ಪ್ರಾರಂಭ ಮಾಡಿದ್ದೇನೆ. ಕನ್ನಡಕ್ಕೋಸ್ಕರ ಹಲವಾರು ಚಳುವಳಿಗಳಲ್ಲಿ ಬಾಗಿಯಾಗಿದ್ದೇನೆ. ಎಂ ಗೋವಿಂದ ಪೈ., ಪಂಜೆ ಮಂಜೇಶ್ವರರಾಯರು ಮೊದಲಾದವರು ಕಾಸರಗೋಡು ಮೂಲದವರು. ಭಾಷೆ ಮೂಲತಃ ಕೊಂಕಣಿಯಾಗಿದ್ದು ಹೋರಾಟ ಮಾಡಿದ್ದು ಕನ್ನಡಿಗರೆಂದು. ನಮ್ಮ ಮೂಲ ಕನ್ನಡ ಎಂದು ಗುರುತಿಸಿಕೊಳ್ಳುವುದಕ್ಕೆ ಹೆಮ್ಮೆಪಡುತ್ತೇವೆ. ಕಾಸರಗೋಡಿನಲ್ಲಿರುವ ಎಲ್ಲ ಭಾಗಗಳು ಕನ್ನಡ ಪ್ರದೇಶಗಳು ಆದರೆ ಕನ್ನಡಿಗರು ನಿಶಕ್ತರಾಗಿದ್ದಾರೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಭಾಷೆ ಪರಸ್ಪರ ಅರ್ಥಮಾಡಿಕೊಳ್ಳುವುದಕ್ಕೆ ಇರುವ ಮಾಧ್ಯಮ. ವಿದ್ಯಾವಂತರು ಒಳ್ಳೆಯ ಕನ್ನಡ ಕೆಲಸ ಮಾಡಿ ನೋವಾದಾಗ ಪ್ರತಿಭಟಿಸಿ ಎಲ್ಲರನ್ನು ಪ್ರೀತಿಸಿ, ಕನ್ನಡ ಉಳಿಸಿ, ಬೆಳೆಸಿ ಹಾಗೂ ಉಳಿದ ಭಾಷೆ, ಸಂಸ್ಕೃತಿಯನ್ನು ಪ್ರೀತಿಸಿ ಎಂದು ತಿಳಿದರು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ವಿ.ವಿ.ಯ ಕುಲಪತಿ ಪ್ರೊ. ಕೆ. ಭೈರಪ್ಪ ಮಾತನಾಡಿ ಕನ್ನಡ ನಾಡಿನ ಸೇವೆಯನ್ನು ಕನ್ನಡಿಗರಾದ ನಾವೆಲ್ಲರೂ ಮಾಡಬೇಕು. ಬೇರೆ ಭಾಷೆಗಳಿಗೆ ಹೆಚ್ಚಿನ ಆದ್ಯತೆ ಕೊಡದೆ ಕನ್ನಡದಲ್ಲಿ ವ್ಯವಹ-ರಿಸಬೇಕು. ವೈಯಕ್ತಿಕವಾಗಿ ನಾನು ಕೂಡಾ ನನ್ನ ಕುಟುಂಬದವರ ಜೊತೆಗೆ ಕನ್ನಡದಲ್ಲೇ ವ್ಯವಹ-ರಿಸುತ್ತೇನೆ. ಆ ಮೂಲಕ ಕನ್ನಡ ಭಾಷೆಯನ್ನು ಉಳಿಸುವ ಮೂಲಕ ಕನ್ನಡದ ಸೇವೆ ಮಾಡುತ್ತಿದ್ದೇನೆ ಎಂದು ಅವರು ಹೇಳಿದರು.

ಸಭಾರಂಭದಲ್ಲಿಕುಲಸಚಿವರಾದ ಪ್ರೊ. ಕೆ. ಎಂ ಲೋಕೇಶ್ ಹಾಗೂ ವಿದ್ಯಾರ್ಥಿ ಪರಿಷತ್ ಪದಾಧಿಕಾರಿಗಳು ಭಾಗವಹಿಸಿದ್ದರು.

# ಚೆಲುವಾಂತ ನಾಟ್ಯ ಮಯೂರಿ

ಭಾವ ರಾಗ ತಾಳಗಳ ಮೇಳಕ್ಕೊಂದು ಮೂರ್ತರೂಪವೇ ಭರತನಾಟ್ಯ.ಮನಸ್ಸಿಗೆ ಮುದ ನೀಡುವ ಮೂಲಕ ಭಿನ್ನರುಚಿಯೊಂದಿಗೆ ಸೌಂದರ್ಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಭರತನಾಟ್ಯದಲ್ಲಿ ಸುಂದರಿಯಾಗಿ ಕಲಾರಸಿಕರ ಮನಕೆ ಬಾಣ ಬಿಟ್ಟು ಮನಗೆದ್ದ ಕುಮಾರ ಇವನು. ಇವನು ಭರತನಾಟ್ಯದಲ್ಲಿ ಹುಡುಗಿಯ ವೇಷದಲ್ಲಿ ಜನಮನ ಗೆದ್ದವನು.

'ಖಣಿ ಹೇಳ್ತಿನವ್ವ ಖಣಿ' ಎನ್ನುತ್ತಾ ಕೊರವಂಜಿ ವೇಷಧಾರಿಯಾಗಿ, ನಯ ನಾಜೂಕಿನಿಂದ, ಹೆಣ್ಣಿನದೇ ವೈಯ್ಯಾರದಿಂದ, ಲಾಲಿತ್ಯಪೂರ್ಣ ಹೆಜ್ಜೆಗಾರಿಕೆ, ಮೋಡಿ ಮಾಡುವ ಮಾತುಗಳಿಂದ ಕಲಾಭಿಮಾನಿಗಳ ಹೃದಯ ಗೆದ್ದ ಚೆಲುವ ಈ ಗುರುತೇಜ್ ಶೆಟ್ಟಿ. ಶಾಲೆಯಿಂದ ನಡೆದ ಪ್ರತಿಭಾ ಕಾರಂಜಿಗಳಲ್ಲಿ, ಭರತನಾಟ್ಯ, ಛದ್ಮವೇಷ, ಭಗವದ್ಗೀತೆ ಕಂಠಪಾಠ, ಯಕ್ಷಗಾನ ಜಿಲ್ಲಾ ಮಟ್ಟದಲ್ಲಿ ಪ್ರಥಮ, ಹೀಗೆ ಹಲವಾರು ಪ್ರಥಮ ಬಹುಮಾನಗಳನ್ನು ಬಾಚಿಕೊಂಡ ಗುರುತೇಜ್‌ಗೆ ಹಲವು ಸನ್ಮಾನಗಳು ಸಂದಿವೆ. ಒಡಿಯೂರು ಗುರುದೇವಾನಂದ ಸ್ವಾಮೀ-ಜಿಯವರಿಂದ ಬೆಳ್ಳಿಪದಕ ಸನ್ಮಾನ, ವಗೆನಾಡು ಶ್ರೀ ಸುಬ್ರಾಯ ದೇವಸ್ಥಾನದ ವತಿಯಿಂದ, ಬನಾರಿ ದೇವಸ್ಥಾನದ ವತಿಯಿಂದ ಸನ್ಮಾನಗಳು ಸಂದಿವೆ.

ಗುರು ಮಂಜೇಶ್ವರ ಬಾಲಕೃಷ್ಣ ಮತ್ತು ಪುತ್ತೂರು ದೀಪಕ್ ಕುಮಾರ್ ಅವರಿಂದ ನಾಟ್ಯ ಕಲಿತ ಗುರುತೇಜ್‌ಗೆ ತಾಯಿಯೇ ಮೊದಲ ಗುರು, ಮನೆಯೇ ಮೊದಲ ನೃತ್ಯಶಾಲೆ. ಆರು ವರ್ಷದ ವರೆಗೆ ಇವನಿಗೆ ತಂದೆ ತಾಯಿಗಳೇ ಗುರುಗಳು. ಇದುವರೆಗಿನ ಎಲ್ಲಾ ರೀತಿಯ ಪ್ರದರ್ಶನ, ವೇಷಗಾರಿಕೆಗಳಿಗೂ ತಾಯಿಯದೇ ಮೇಕಪ್. ತಾಯಿಗೆ ಮಗನೂ ಇವನೇ ಮಗಳೂ ಇವನೆ. ತಾಯಿಯೇ ಇವನಿಗೆ ಬೆನ್ನೆಲುಬು. ಆರು ವರ್ಷದ ನಂತರ ಭರತನಾಟ್ಯವನ್ನು ಮಂಜೇಶ್ವರ ಬಾಲಕೃಷ್ಣ ಅವರಿಂದ ಮತ್ತು ಪುತ್ತೂರು ದೀಪಕ್ ಕುಮಾರ್ ಅವರಿಂದ ಭರತನಾಟ್ಯದಲ್ಲಿ ಜೂನಿಯರ್ ಪದವಿಯನ್ನು ಗಳಿಸಿ, ಜೂನಿಯರ್ ಮತ್ತು ಸೀನಿಯರ್ ವಿಭಾಗ ಎರಡರಲ್ಲೂ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವನು. ಕೂಚುಪುಡಿ ಮತ್ತು ಜಾನಪದ ನೃತ್ಯದಲ್ಲಿ ಸವಿತಾ ಜೀವನ್ ಮಂಗಳೂರು ಇವರಿಂದ ಸೀನಿಯರ್ ಪದವಿ ಪಡೆಯುತ್ತಾನೆ.

ಗುರುತೇಜ್‌ಗೆ ಕಲೆ ಮನೆಯಿಂದಲೇ ಬಂದ ಬಳುವಳಿ. ಇವನ ತಂದೆ ಸುಬ್ರಹಮಣ್ಯ ಶೆಟ್ಟಿ ಸ್ವತಃ ಸಾಹಿತಿ, ಯಕ್ಷಗಾನ ವೇಷಧಾರಿ, ನಾಟಕ ನಿರ್ದೇಶಕ, ಯಕ್ಷಗಾನ ಹಾಡು, ಕತೆ ಬರಹಗಾರ. ಪ್ರಸ್ತುತ ಬಂಟ್ವಾಳ ತಾಲೂಕಿನ, ಕರೋಪಾಡಿ ಗ್ರಾಮದ, ಒಡಿಯೂ-ರಿನ ಅಂಚೆ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ಉಷಾ ಎಸ್. ಶೆಟ್ಟಿ ಯಕ್ಷಗಾನ ವೇಷಧಾರಿ ಹಾಗೂ ಭರತನಾಟ್ಯ ಕಲಾವಿದೆ, ಮಾತ್ರವಲ್ಲದೆ ಭರತನಾಟ್ಯ ಶಿಕ್ಷಕಿಯೂ ಹೌದು. ಅಜ್ಜಿ ಲಕ್ಷ್ಮಿ ಶೆಟ್ಟಿ ಕಲೆಯ ಆರಾಧಕಿ, ಪ್ರೋತ್ಸಾಹಿ ಕೂಡ. ಹೀಗೆ ಹಿರಿಯ ಕಲಾ ಪರಂಪರೆಯ ಈ ಚೆಲುವನಿಗೆ ಸಂಗೀತ, ನೃತ್ಯ,ಗಳ ಕಲೆ ತಾನಾಗಿ ಒಲಿದು ಬಂದಿದೆ

ಪುಟ್ಟ ಪುಟ್ಟ ಹೆಜ್ಜೆ ಇಟ್ಟು ನಡೆದಾಡಲು ಕಲಿಯುವ ಮೂರರ ಹರೆಯದಲ್ಲೇ ಅಮ್ಮ ಹಾಕಿದ ವಿವೇಕಾನಂದರ ವೇಷದಲ್ಲಿ, ಛದ್ಮವೇಷದೊಂದಿಗೆ ವೇದಿಕೆಗೆ ಕಾಲಿಟ್ಟ ಕುವರನಿಗೀಗ ವೇದಿಕೆಯೇ



ಜೀವಾಳ. ಅಲ್ಲಿಂದ ಅದೆಷ್ಟೋ ದೊಡ್ಡ ದೊಡ್ಡ ವೇದಿಕೆಗಳಲ್ಲಿ ಹಲವಾರು ಸ್ಪರ್ಧೆಗಳನ್ನು ಎದುರಿಸಿ ಬಹುಮಾನಗಳನ್ನು ಬಾಚಿಕೊಂಡ ಧೀರ ಇವನು. 'ಲಂಡನ್ ಯಕ್ಷಗಾನ ಸ್ಪರ್ದೆ' ಯಲ್ಲಿ ಭಾಗವಹಿಸಿದ ಇವನ ತಂಡಕ್ಕೆ ಪ್ರಥಮ ಬಹುಮಾನ. **"All India Postal Employees Cultural Meet"** ವತಿಯಿಂದ 2011ರಲ್ಲಿ ಗುಜರಾತ್‌ನ ವಡೋದರದಲ್ಲಿ ನಡೆದ ಭರತನಾಟ್ಯದಲ್ಲಿ ಚಿನ್ನದ ಪದಕ, 2012ರಲ್ಲಿ ಮಹಾರಷ್ಟ್ರದ ನಾಗಪುರರದಲ್ಲಿ ನಡೆದ ಭರತನಾಟ್ಯ ಮತ್ತು ಕೂಚುಪುಡಿ ಸ್ಪರ್ದೆಯಲ್ಲಿ ಚಿನ್ನದ ಪದಕ, 2013ರಲ್ಲಿ ಮಧ್ಯಪ್ರದೇಶದ ಜಬ್ಬಲ್‌ಪುರದಲ್ಲಿ ನಡೆದ ಸ್ಪರ್ಧೆಯಲ್ಲಿ ಚಿನ್ನದ ಪದಕ ಮತ್ತು 2014ರಲ್ಲಿ ದೆಹಲಿಯ ಡೆಹರಾಡೂನ್‌ನಲ್ಲಿ ನಡೆದ ಕೂಚುಪುಡಿಯಲ್ಲಿ ಪ್ರಥಮ ಸ್ಥಾನದಲ್ಲಿ ಜಯಶಾಲಿ ಈತ. ಎಷ್ಟೇ ದೊಡ್ಡ ಸ್ಥಾನ, ಉದ್ಯೋಗ ಗಳಿಸಿದರೂ, ಹಿರಿಯರು ನೀಡಿದ ಬಳುವಳಿ ಮತ್ತು ಜನಮಾನಸರ ಹೃದಯದಲ್ಲಿ ತನಗೊಂದು ಸ್ಥಾನ ಕಲ್ಪಿಸಿಕೊಟ್ಟ ಈ ಕಲೆಗಳನ್ನು ಎಂದಿಗೂ ಬದಿಗಿರಿಸಲಾರೆ ಎನ್ನುತ್ತಾನೆ ಗುರುತೇಜ್.

ಪ್ರಾರಂಭ ಹಂತದ ಯಕ್ಷಗಾನ ಶಿಕ್ಷಣವನ್ನೂ ತಾಯಿಯಿಂದಲೇ ಪಡೆದು, ನಾಟ್ಯತರಬೇತಿ ಮತ್ತು ಯಕ್ಷಗಾನದಲ್ಲಿ ಹೆಚ್ಚಿನ ಶಿಕ್ಷಣವನ್ನು ಬಾಯಾರು ಶೇಖರ್ ಶೆಟ್ಟಿ, ಉಂಡೆಮನೆ ಕೃಷ್ಣ ಭಟ್ ಮತ್ತು ಉಮೇಶ್ ಶೆಟ್ಟಿ ಉಬರಡ್ಕ ಇವರಿಂದ ತನ್ನ ಬತ್ತಳಿಕೆಯಲ್ಲಿ ತುಂಬಿಸಿಕೊಳ್ಳುತ್ತಾನೆ. ಯಕ್ಷಗಾನದಲ್ಲಿ ಸ್ತ್ರೀಪಾತ್ರ, ಪುಂಡುವೇಷ, ಹಾಸ್ಯಪಾತ್ರಗಳಿಗೆ ಜೀವ ತುಂಬುತ್ತಾ ಎಲ್ಲರ ಅಚ್ಚುಮೆಚ್ಚಿನ ಕಲಾಗಾರನಾಗಿ ಹೊರಹೊಮ್ಮುತ್ತಿರುವ ಬಹುಮುಖ ಪ್ರತಿಭೆ ಇವನು. ಮುಮ್ಮೇಳ ಮಾತ್ರವಲ್ಲದೆ ಹಿಮ್ಮೇಳದಲ್ಲೂ ತನ್ನ ಛಾಪು ಮೂಡಿಸುವ ನಿಟ್ಟಿನಲ್ಲಿ ಚಂಡೆ, ಮದ್ದಳೆ, ಭಾಗವತಿಕೆಗಳನ್ನು ಮಾಂಬಡಿ ಸುಬ್ರಹ್ಮಣ್ಯ ಭಟ್ ಅವರಿಂದ ಕರಗತ ಮಾಡಿಕೊಂಡಿರುವನು. ಸಂಗೀತದಲ್ಲೂ ಆಸಕ್ತಿ ಇವನಿಗೆ. ಮಡೆಯಾಳ ಶ್ಯಾಮ ಸುಂದರಿ ಭಟ್ ಅವರಿಂದ ಸಂಗೀತದಲ್ಲಿ, ಪ್ರಥಮ ಶ್ರೇಣೀಯಲ್ಲಿ ಜೂನಿಯರ್ ಮುಗಿಸಿರುವನು. ಕೀಬೋರ್ಡ್ ಹಾಗೂ ಹಾರ್ಮೋನಿಯಂಗಳನ್ನು ಕಿರಣ್ ಕುಮಾರ್ ಪುತ್ತೂರು ಇವರಿಂದ ಕಲಿತಿರುವನು. ಸಂಗೀತ, ಕೂಚುಪುಡಿ, ಭರತನಾಟ್ಯ, ಯಕ್ಷಗಾನಗಳನ್ನು ಅಭ್ಯಾಸ ಮಾಡಿದ ಈ ಪೋರ ಹೆಣ್ಣನ್ನೇ ನಾಚಿಸುವಂತಹ ನಾರೀ ವೇಷಧಾರಿ.

ಈತ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದು ಕನ್ಯಾನದ ಸರಸ್ವತಿ ವಿದ್ಯಾಲಯದಲ್ಲಿ. ಅನಂತರದ ಪ್ರೌಢ ಶಿಕ್ಷಣ ಮತ್ತು ಪ್ರಸ್ತುತ ವಾಣಿಜ್ಯ ವಿಭಾಗದಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಶ್ರೀ ಸತ್ಯಸಾಯಿ ಲೋಕಸೇವಾ ಸಂಸ್ಥೆ ಅಳಿಕೆಯಲ್ಲಿ ಪಡೆಯುತ್ತಿದ್ದಾನೆ. ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಗುರುತೇಜ್ ಪಠ್ಯದಲ್ಲೂ ಮುಂದು. ಎಲ್ಲಾ ಪಠ್ಯ ವಿಷಯಗಳಲ್ಲೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಗೊಳುತ್ತಿರುವ ಚತುರ.

ಪ್ರಸ್ತುತ ಸವಿತಾ ಜೀವನ್ ಮಂಗಳೂರು ಅವರಿಂದ ಭರತನಾಟ್ಯದಲ್ಲಿ ವಿದ್ವತ್ ಮಾಡುತ್ತಿರುವ ಗುರುತೇಜ್ ತನ್ನ ಪ್ರಗತಿ ಹಾಗೂ ಸಾಧನೆಗೆ ತಾಯಿ, ತಂದೆಯ ಸಕಾಲಿಕ ಮಾರ್ಗದರ್ಶನ ಮತ್ತು ಪ್ರೇರಣೆ ಹಾಗೂ ನೃತ್ಯ ಹಾಗೂ ವಿದ್ಯಾಗುರುಗಳ, ಶ್ರೀ ಸತ್ಯಸಾಯೀ ಲೋಕ ಸೇವಾ ಸಂಸ್ಥೆ ಅಳಿಕೆಯ ಅಧ್ಯಕ್ಷರು ಗಂಗಾಧರ ಭಟ್ ಅವರ ನಿರಂತರ ಪ್ರೋತ್ಸಾಹವೇ ಕಾರಣ ಎಂದು ಅಭಿಮಾನದಿಂದ ಹೇಳುತ್ತಾನೆ.

**ಮೇಘಲಕ್ಷ್ಮಿ ಎಂ**

## ಚಿತ್ರ ವಿಮರ್ಶೆ

# ಪ್ರೇಕ್ಷಕರ ಮನಗೆದ್ದ ಪಿಂಕ್

ಅನಿರುದ್ಧರಾಯ್ ಚಾಧುರಿ ನಿರ್ದೇಶನದ ಪಿಂಕ್ ಸಿನಿಮಾ ತನ್ನ ಅಪರೂಪದ ಕಥಾವಸ್ತುವಿನಿಂದಾಗಿ ಪ್ರೇಕ್ಷಕರ ಗಮನ ಸೆಳೆದಿದೆ. ಲಾಯರ್ ಪಾತ್ರದಲ್ಲಿ ಅಮಿತಾಭ್ ಬಚ್ಚನ್ ಗಮನ ಸೆಳೆದರೆ ವಿಲನ್ ಅರೋರಾ ಆಗಿ ತಾಪ್ಸಿ ಪನ್ನು ಇಡೀ ಚಿತ್ರವನ್ನು ಆವ-ರಿಸಿಕೊಂಡಿದ್ದಾರೆ.

ದಿಲ್ಲಿಯ ಮೂರು ಹುಡುಗಿಯರು ಮಿನಲ್(ತಾಪ್ಸಿ), ಫಲಕ್(ಕೃತಿ), ಮತ್ತು ಆ್ಯಂಡ್ರೇಯ(ಆ್ಯಂಡ್ರೇಯ) ಇವರು ತುಂಬಾ ಬಲಿಷ್ಟ ವ್ಯಕ್ತಿಯಾದಂತಹ ರಾಜವೀರ್ (ಅಂಗದ್) ನಿಂದ ಚುಡಾಯಿಸಲ್ಪಡುತ್ತಾರೆ. ಇದ-ರಿಂದ ರೊಚ್ಚಿಗೆದ್ದ ಮಿನಲ್, ರಾಜ್‌ವೀರ್‌ನನ್ನು ಬಾಟಲಿಯಿಂದ ಹೊಡೆದು ಘಾಸಿಗೊಳಿಸುತ್ತಾಳೆ. ಇಲ್ಲಿಂದ ಅವರುಗಳಿಗೆ ತೊಂದರೆಗಳು ಶುರುವಾಗುತ್ತದೆ. ಈ ರೀತಿ ಕಥೆಯ ಪ್ರಾರಂಭವಾಗುತ್ತದೆ.

ಪಿಂಕ್ ಸಿನಿಮಾದ ಸಂದೇಶವು ತುಂಬಾ ಸ್ಪಷ್ಟ ಮತ್ತು ನಿಖರವಾಗಿದೆ. ಇದು ಭಾರತೀಯ ಊಳಿಗಮಾನ್ಯ ಮನೋಭಾವದ ಕುರಿತು ಹೇಳುವ ಒಂದು ಚಿತ್ರ. ಯಾವರೀತಿ ಪುರುಷರು ಮತ್ತು ಮಹಿಳೆಯರನ್ನು ಅಳತೆ ಮಾಡಿ ನೋಡುವ ಸಮಾಜ ಮತ್ತು ಪುರುಷ ಸಮಾಜದಲ್ಲಿ ಸ್ತ್ರೀಯನ್ನು ತುಚ್ಛ ಮನೋಭಾವದಿಂದ ನೋಡುವ




ಸಮಾಜ ಇಲ್ಲಿ ಚಿತ್ರಿಸಲ್ಪಡುತ್ತದೆ.

ಮಿನಲ್, ಫಲಕ್ ಮತ್ತು ಆ್ಯಂಡ್ರೀಯ ಮೂವರು ಮಧ್ಯವರ್ಗದ ಕುಟುಂಬದಿಂದ ಬಂದ ಹುಡುಗಿಯರು. ರಾಜ್‌ವೀರ್ ನ ಆಹ್ವಾನದ ಮೇರೆಗೆ ಔತಣಕೂಟಕ್ಕೆ ತೆರಳುವ ಇವರು, ರಾಜ್‌ವೀರ್ ಮತ್ತು ಅವನ ಸ್ನೇಹಿತರಿಂದ ಚುಡಾಯಿಸಲ್ಪಡುತ್ತಾರೆ. ಇದರಿಂದ ಪಾರಾಗುವ ಸಲುವಾಗಿ ಮಿನಲ್ ಆತನ ತಲೆಗೆ ಬಾಟಲಿಯಿಂದ ಹೊಡೆದು ಪರಾರಿಯಾಗುತ್ತಾರೆ. ಇದರಿಂದ ರೊಚ್ಚಿಗೆದ್ದ ರಾಜ್‌ವೀರ್ ತನ್ನ ಹಣ ಮತ್ತು ರಾಜಕೀಯ ಬಲದಿಂದ ಈ ಮೂವರು ಹುಡುಗಿಯರ ವಿರುದ್ಧ ದೂರು ದಾಖಲಿಸುತ್ತಾನೆ. ಜೊತೆಗೆ ಅವರುಗಳು ವೇಶ್ಯೆಯರು ಎಂದು ಬಿಂಬಿಸುತ್ತಾನೆ.

ಕೇಸ್ ಕೋರ್ಟು ಮೆಟ್ಟಿಲೇರುತ್ತದೆ. ವಕೀಲನಾಗಿ ದೀಪಕ್ ಶೇಹಗಲ್(ಅಮಿತಾಭ್) ಅವರು (ಬೈಪೋಲಾರ್ ಡಿಸಾರ್ಡರ್) ಹೊಂದಿರುವ ವ್ಯಕ್ತಿಯಾಗಿರುತ್ತಾರೆ. ಈ ಹುಡುಗಿಯರ ಪರ ವಕೀಲರಾಗಿರುತ್ತಾರೆ. ಕಥೆ ಇಲ್ಲಿಂದ ಬೇರೆ ಆಯಾಮವನ್ನು ಪಡೆಯುತ್ತದೆ. ಬಚ್ಚನ್ ಅವರ ಅಭಿನಯ ಅಮೋಘವಾಗಿ ಮೂಡಿ ಬಂದಿದೆ. ಸಂಗೀತ ಮತ್ತು ಕ್ಯಾಮರಾವರ್ಕ್ ಸಾಧಾರಣವಾಗಿದೆ. ಒಟ್ಟಾರೆಯಾಗಿ ಇದೊಂದು ಒಳ್ಳೆಯ ಸಂದೇಶವನ್ನು ಸಾರುವ ಚಿತ್ರವಾಗಿದೆ.

**ಸೋಮಣ್ಣ**

# ರೋಗ ನಿವಾರಕ ಕ್ಯಾರೆಟ್

ಲಭ್ಯವಿರುವ ಅತ್ಯಂತ ಆರೋಗ್ಯದಾಯಕ ತರಕಾರಿಗಳಲ್ಲಿ ಕ್ಯಾರೆಟ್ ಎಂದೇ ಎಲ್ಲ-ರಿಗೂ ಪರಿಚಯವಾಗಿರುವ ಕೆಂಪು ಮೂಲಂಗಿ ಕೂಡ ಒಂದು. ತನ್ನಲ್ಲಿ ಹಲವಾರು ಔಷಧೀಯ ಗುಣಗಳ ಜೊತೆಗೆ ನೈಸರ್ಗಿಕ ವಿಟಮಿನ್ ಮತ್ತು ಪೋಷಕಾಂಶಗಳನ್ನು ಹೊಂದಿರುವ ಕೆಂಪು ಮೂಲಂಗಿ ಆರೋಗ್ಯ ಕಾಪಾಡಿಕೊಳ್ಳಲು ಬಲು ಸಹಕಾ-ರಿಯಾಗಿದೆ. ಚಳಿಗಾಲಕ್ಕೆ ಹೇಳಿ ಮಾಡಿಸಿದಂತಹ ತರಕಾರಿ ಈ ಕ್ಯಾರೆಟ್ ಎಂದರೆ ತಪ್ಪಾಗಲಾರದು. ಹಲವಾರು ರುಚಿ ರುಚಿಯ ಖಾದ್ಯಗಳಲ್ಲಿ ಕ್ಯಾರೆಟ್ ತನ್ನ ಸ್ಥಾನ ಸ್ಥಾಪಿಸಿಕೊಂಡಿದೆ. ಕೇವಲ ರುಚಿಗಷ್ಟೇ ಅಲ್ಲ ಕ್ಯಾರೆಟ್ ದೇಹದ ಆರೋಗ್ಯದಲ್ಲೂ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದೆ. ಹಾಗಾಗಿ ಕ್ಯಾರೆಟ್ ತಿನ್ನುವುದರಿಂದ ಹೃದಯದ ಸಮಸ್ಯೆಗಳಿಂದ ದೂರವಿರಬಹುದು. ಕ್ಯಾರೆಟ್‌ನಲ್ಲಿನ ಅಧಿಕ ವಿಟಮಿನ್ ಕಣ್ಣಿನ ದೃಷ್ಟಿಯನ್ನು ಚುರುಕುಗೊಳಿಸುತ್ತದೆ. ಕ್ಯಾರೆಟ್‌ನಲ್ಲಿ ಐಯೋಟಿನ್ ಮತ್ತು ಫೈಬರ್ ಅಂಶ ಇರುವುದರಿಂದ ಕ್ಯಾರೆಟ್ ತಿನ್ನುವುದರಿಂದ, ಬೊಜ್ಜು ಕರಗುವ ಮೂಲಕ ದೇಹದ ತೂಕವನ್ನು ಇಳಿಸಿಕೊಳ್ಳಬಹುದು.

ಇತ್ತೀಚಿನ ದಿನಗಳಲ್ಲಿ ಎಲ್ಲರ ಮೂಲಮಂತ್ರ ಡಯೆಟಿಂಗ್. ಕ್ಯಾರೆಟ್‌ನಲ್ಲಿ ಹೆಚ್ಚು ಕ್ಯಾಲರಿ ಇರುವುದ-ರಿಂದ, ನೈಸರ್ಗಿಕವಾಗಿ ತೂಕ ಇಳಿಸಿಕೊಳ್ಳಲು ಕ್ಯಾರೆಟ್ ಡಯೆಟಿಂಗ್ ತುಂಬಾ ಪ್ರಚಲಿತದಲ್ಲಿದೆ. ದೇಹದಲ್ಲಿ ರಕ್ತ ಕಣಗಳು ಹೆಚ್ಚಾಗಲು ದಾಳಿಂಬೆ ಜೊತೆ ಕ್ಯಾರೆಟ್ ಸೇವಿಸಿದರೆ ಉತ್ತಮ. ಮಹಿಳೆಯರು ಕ್ಯಾರೆಟ್‌ನ್ನು ಹೆಚ್ಚು ಸೇವಿಸುವುದರಿಂದ ಸ್ತನ ಕ್ಯಾನ್ಸರ್‌ನಿಂದ ದೂರವಿರಬಹುದು ಎಂಬುದನ್ನು ಸಂಶೋಧನೆಯೊಂದು ಹೇಳುತ್ತದೆ.

**ಮೇಘಲಕ್ಷ್ಮಿ ಎಂ**

**ವಿದ್ಯಾರ್ಥಿ ಸಂಪಾದಕರು**

**ಮೇಘಲಕ್ಷ್ಮಿ ಮರುವಾಳ**
**ಸಾಯಿರಾಜ್**
**ಸೋಮಣ್ಣ**
**ಸುದೇವ್**
**ಧನ್ಯಶ್ರೀ**
**ಸುನೀಲ್**

ಸಂಪಾದಕರು ಹಾಗೂ ಪ್ರಕಾಶಕರು: ಪ್ರೊ. ವಹೀದಾ ಸುಲ್ತಾನ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ದ.ಕ, ಕಾರ್ಯಕಾರಿ ಸಂಪಾದಕರು: ಪ್ರೊ. ಜಿ. ಪಿ. ಶಿವರಾಂ. ಮುದ್ರಕರು: ನೆಡ್ ಪ್ರಿಂಟ್, ಯೆಯ್ಯಾಡಿ–575008